ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೭೩

**ಪಟ್ಟಿ - ೧೨**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಮಂಗಳವಾರ, ದಿನಾಂಕ : ೦೮ನೇ ಜುಲೈ, ೨೦೧೪**

---

## ಸಮೂಹ - II

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ರಾಜ್ಯ ಅಲ್ಪಸಂಖ್ಯಾತ ಆಯೋಗ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೭೦೪ (೮೯೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಲ್ಪಸಂಖ್ಯಾತ ಆಯೋಗವು ಎಂದಿನಿಂದ ಕಾರ್ಯನಿರ್ವಹಿಸುತ್ತಿದೆ, ಇಲ್ಲಿಯವರೆಗೂ ಈ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಮತ್ತು ಸಲ್ಲಿಸುತ್ತಿರುವವರ ಹೆಸರು ಸೇವಾ ಅವಧಿ, ಇವುಗಳ ವಿವರ ನೀಡುವುದು ;

(ಆ) ಯಾವ ಯಾವ ಅಧ್ಯಕ್ಷರು ತಮ್ಮ ತಮ್ಮ ಕಾರ್ಯ ಅವಧಿಯಲ್ಲಿ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಿರುತ್ತಾರೆ ; ಈ ಪ್ರತಿಯೊಂದು ವರದಿಗಳ ಪ್ರಮುಖಾಂಶಗಳನ್ನು ತಿಳಿಸುವುದು ;

(ಇ) ಯಾವ ಯಾವ ವರದಿಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಗಿದೆ (ಮಂಡಿಸಿದ ದಿನಾಂಕ ವಿವರ ನೀಡುವುದು) ?

## ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಗಿ ಸೇತುವೆ ನಿರ್ಮಾಣ ಕುರಿತು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೦೫ (೮೯೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಗಿ ಗ್ರಾಮದ ಹತ್ತಿರ ಕೃಷ್ಣಾನದಿಗೆ ಅಡ್ಡಲಾಗಿ ನಿರ್ಮಾಣವಾಗುತ್ತಿರುವ ಸೇತುವೆಯ

ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ; ಗುತ್ತಿಗೆದಾರರಿಗೆ ನೀಡಿರುವ ಕಾಲಮಿತಿ ಎಷ್ಟು; ಆ ಅವಧಿಯಲ್ಲಿ ಪೂರ್ತಿಗೊಳ್ಳುವುದೇ ಹೇಗೆ ;

(ಆ) ಜಮಖಂಡಿ ನಗರದಿಂದ ನಿರ್ಮಾಣವಾಗುತ್ತಿರುವ ಸೇತುವೆ ಮೂಲಕ ಸಾವಳಗಿಯಿಂದ ತೆಲಸಂಗ ಕ್ರಾಸ್‌ವರೆಗೆ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರಕಾರದ ಮುಂದೆ ಇದೆಯೇ, ಹೇಗೆ; ಇದ್ದರೆ, ಯಾವಾಗ ಮಂಜೂರು ಮಾಡಲಾಗುವುದು ?

## ಅಲ್ಪಸಂಖ್ಯಾತರ ಅಭಿವೃದ್ಧಿಯ ಯೋಜನೆಗಳ ಅನುಷ್ಠಾನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೦೬ (೯೬೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಇರುವ ಯೋಜನೆಗಳಾವುವು (ಪೂರ್ಣ ವಿವರ ನೀಡುವುದು) ;

(ಆ) ಸದರಿ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಯೋಜನೆಗಳ ಅನುಷ್ಠಾನಕ್ಕೆ ಅಡೆತಡೆ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಇ) ಸದರಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ವಿದ್ಯುತ್ ಉತ್ಪಾದನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೦೭ (೯೬೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಾರ್ಷಿಕ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣವೆಷ್ಟು (ಯೂನಿಟ್‌ಗಳಲ್ಲಿ ಮಾಹಿತಿ ನೀಡುವುದು) ;

(ಆ) ಪ್ರಸ್ತುತ ಯಾವ ಯಾವ ಮೂಲಗಳಿಂದ ವಿದ್ಯುತ್ ಉತ್ಪಾದನೆಯಾಗುತ್ತಿದೆ (ಪ್ರತಿ ವಿದ್ಯುತ್ ಉತ್ಪಾದನೆ ಘಟಕ ಹಾಗೂ ಉತ್ಪಾದನೆಯ ವಿವರ ನೀಡುವುದು) ;

(ಇ) ರಾಜ್ಯಕ್ಕೆ ವಾರ್ಷಿಕ ಅಗತ್ಯವಿರುವ ವಿದ್ಯುತ್ ಪ್ರಮಾಣವೆಷ್ಟು (ವಿವರ ನೀಡುವುದು) ;

(ಈ) ಅಗತ್ಯವಾದ ವಿದ್ಯುತ್ ಉತ್ಪಾದನೆಗೆ ವ್ಯತ್ಯಾಸವಿರುವುದನ್ನು ಸರಿಪಡಿಸಲು ಸರ್ಕಾರ ಯಾವ ಮಾರ್ಗ ಅನುಸರಿಸಿದೆ (ವಿವರ ನೀಡುವುದು) ?

## ಕೃಷಿ ಮಾರುಕಟ್ಟೆಯ ವಹಿವಾಟನ್ನು ಹೆಚ್ಚಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೦೮ (೯೬೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸೊಸೈಟಿಯಲ್ಲಿ ರೈತರ ಉಪಯೋಗಕ್ಕಾಗಿ ಕೈಗೊಳ್ಳುವ ಯೋಜನೆಗಳಾವುವು (ಪೂರ್ಣವಾದ ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಮಾಟಾಟ ಕೇಂದ್ರಗಳಲ್ಲಿ ವಹಿವಾಟು ಕಡಿಮೆಯಿದ್ದು, ಸದರಿ ಮಾರುಕಟ್ಟೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು (ಪೂರ್ಣ ವಿವರ ನೀಡುವುದು) ?

## ಲೋಕೋಪಯೋಗಿ ವಿವಿಧ ಯೋಜನೆಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೦೯ (೯೭೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ೨೦೧೩-೨೦೧೪ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾದ ಒಟ್ಟು ಅನುದಾನವೆಷ್ಟು; (ಅನುದಾನದ ಪೂರ್ಣ ಮಾಹಿತಿ, ಲೆಕ್ಕ ಶೀರ್ಷಿಕೆವಾರು, ಯೋಜನಾವಾರು, ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಆ) ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಬಿಡುಗಡೆ ಮಾಡಬೇಕಾದ ಯೋಜನೆಗಳಾವುವು (ವಿವರ ನೀಡುವುದು) ;

(ಈ) ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ಜಿಲ್ಲಾ, ತಾಲ್ಲೂಕುವಾರು ವಿವರ ನೀಡುವುದು) ;

(ಉ) ಕೈಗೆತ್ತಿಕೊಳ್ಳಬೇಕಾದ, ಬಾಕಿ ಇರುವ ಕಾಮಗಾರಿಗಳಾವುವು? (ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) ;

## ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ಸೇರಿಸುತ್ತಿರುವ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೦ (೮೯೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸಲಾಗುತ್ತದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) ;

(ಆ) ರೇಷ್ಮೆ ಇಲಾಖೆಯು ಶತಮಾನೋತ್ಸವವನ್ನು ಆಚರಿಸುತ್ತಿರುವ ಸಂಭ್ರಮದ ಈ ವೇಳೆಯಲ್ಲಿ ಇಲಾಖೆಯನ್ನು ಮುಚ್ಚಿ ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ಇಲ್ಲವೇ ಪುನರ್ ಸಂಘಟನೆಕೈಗೊಳ್ಳುವ ಆಘಾತಕಾರಿ ವಿಷಯ ಸರ್ಕಾರದ ಮುಂದಿರುತ್ತದೆಯೇ; ಸದರಿ ವಿಷಯದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ (ವಿವರ ನೀಡುವುದು) ;

(ಇ) ಈ ಇಲಾಖೆಯಲ್ಲಿ ಈಗಾಗಲೇ ಇರುವ ಸಿಬ್ಬಂದಿಗಳ ವಿಷಯದಲ್ಲಿ ಸರ್ಕಾರದಿಂದ ಯಾವ ನಿರ್ಧಾರ ಕೈಗೊಳ್ಳಲಾಗುತ್ತದೆ (ವಿವರ ನೀಡುವುದು) ?

## ಬರದಿಂದ ಬೆಳೆ ಹಾನಿಯಾದರೆ ರೈತರಿಗೆ ಪರಿಹಾರ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೧ (೮೯೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯಲ್ಲಿ ಅರಿಶಿನ, ಶುಂಠಿ, ಕಬ್ಬು, ಅಡಿಕೆ ಹಾಗೂ ಮಾವು ಪ್ರಮುಖ ಬೆಳೆಗಳಾಗಿದ್ದು, ರೈತರು ತಮ್ಮ ಉತ್ಪನ್ನಗಳಿಗೆ ವಿವಿಧ ಬ್ಯಾಂಕ್‌ಗಳಲ್ಲಿ ಸಾಲ ಪಡೆದಿದ್ದು, ಈಗ ಬರದಿಂದಾಗಿ ರೈತರು ತಾವು ಪಡೆದ ಸಾಲವನ್ನಾಗಲೀ ಅಥವಾ ಬಡ್ಡಿಯನ್ನಾಗಲೀ ಸಕಾಲದಲ್ಲಿ ಪಾವತಿ ಮಾಡಲಾಗದೆ, ಬ್ಯಾಂಕ್‌ನವರಿಂದ ಶೋಷಣೆಗೆ ಒಳಗಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಆ) ಗಮನಿಸಿದ್ದಲ್ಲಿ, ಜಿಲ್ಲೆಯ ರೈತಾಪಿ ವರ್ಗಕ್ಕೆ ಯಾವ ರೀತಿ ಪರಿಹಾರ ನೀಡಲು ಉದ್ದೇಶಿಸಿದೆ (ವಿವರ ನೀಡುವುದು)?

## ಸಮಾಜ ಕಲ್ಯಾಣ ಅಭಿವೃದ್ಧಿ ಕಾರ್ಯಗಳು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೨ (೮೯೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರಿಗೆ ಕಳೆದ ೩ ವರ್ಷಗಳಲ್ಲಿ ಕೈಗೊಂಡ ಹಾಗೂ ಒದಗಿಸಿದ ಅಭಿವೃದ್ಧಿ ಕಾರ್ಯಗಳ ವಿವರವನ್ನು ತಾಲ್ಲೂಕುವಾರು ನೀಡುವುದು ;

(ಆ) ಅಭಿವೃದ್ಧಿಪಡಿಸಿದ ಕಾಮಗಾರಿಗಳಿಗೆ ಹಾಗೂ ಒದಗಿಸಿದ ಸೌಲಭ್ಯಗಳ (ಸ್ವ ಉದ್ಯೋಗ, ಸಾಲ, ಸಮುದಾಯ ಭವನ ನಿರ್ಮಾಣ ಇತ್ಯಾದಿ) ಹಾಗೂ ವೆಚ್ಚ ಮಾಡಿದ ಅನುದಾನವೆಷ್ಟು ;(ವಿವರವನ್ನು ತಾಲ್ಲೂಕುವಾರು ನೀಡುವುದು)

(ಇ) ಹೀಗೆ ನೀಡಿರುವ ಅನುದಾನದಲ್ಲಿ ಅವ್ಯವಹಾರ ಆಗಿರುತ್ತದೆಯೇ? (ವಿವರ ನೀಡುವುದು);

## ಎಳನೀರು ಮಾರುಕಟ್ಟೆ ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೧೩ (೯೪೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮದ್ದೂರು ಎಳನೀರು ಮಾರುಕಟ್ಟೆಯನ್ನು ಆಧುನೀಕರಿಸುವ ಬಗ್ಗೆ ಸರ್ಕಾರದ ಗಮನದಲ್ಲಿದೆಯೇ ;

(ಆ) ಇದ್ದರೆ, ಸದರಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಇದುವರೆವಿಗೂ ಕೈಗೊಂಡ ಕ್ರಮಗಳೇನು ;

(ಇ) ಪ್ರಸಕ್ತ ವರ್ಷದಲ್ಲಿ ಸದರಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ನಿಗದಿಪಡಿಸಿರುವ ಹಣವೆಷ್ಟು (ಪೂರ್ಣ ವಿವರ ನೀಡುವುದು)?

## ವಕ್ಫ್ ಬೋರ್ಡ್‌ಗೆ ಸೇರಿದ ಮಸೀದಿಗಳು

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೪ (೯೦೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಕ್ಫ್ ಬೋರ್ಡ್‌ಗೆ ಸೇರಿದ ಮಸೀದಿಗಳು ಎಷ್ಟು : (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇವುಗಳಲ್ಲಿ ಕೆಲವು ವರ್ಷಗಳ ಹಿಂದೆ ನಿರ್ಮಾಣವಾಗಿದ್ದು ಅವುಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿಪಡಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು)

(ಈ) ಮಸೀದಿಗಳನ್ನು ದುರಸ್ಥಿಪಡಿಸಲು ಕಳೆದ ೫ ವರ್ಷಗಳಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು; ಇದರಲ್ಲಿ ವೆಚ್ಚವಾದ ಅನುದಾನವೆಷ್ಟು ?

## ಪೂನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಟೋಲ್ ಸಂಗ್ರಹಣೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೧೫ (೯೦೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–೪ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಟೋಲ್ ಸಂಗ್ರಹಣೆ ಕೇಂದ್ರಗಳೆಷ್ಟು; ಟೋಲ್ ಸಂಗ್ರಹಣೆ ಮಾಡಲು ಇರುವ ಸರಕಾರದ ಮಾನದಂಡಗಳೇನು ;

(ಆ) ಸರ್ಕಾರದ ಮಾನದಂಡಗಳನ್ನು ಮೀರಿ ಟೋಲ್ ಸಂಗ್ರಹಣೆ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಇಂತಹ ಸಾರ್ವಜನಿಕ ತೊಂದರೆಗಳನ್ನು ನಿವಾರಿಸಲು ಸರಕಾರ ಕೈಗೊಂಡ ಕ್ರಮಗಳೇನು ?

## ಯಶಸ್ವಿನಿ ಆರೋಗ್ಯ ವಿಮಾ ಯೋಜನೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೧೬ (೯೦೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಹಲವಾರು ವರ್ಷಗಳಿಂದ ಜಾರಿಯಲ್ಲಿದ್ದು ಈಗ ನಗರ ಪ್ರದೇಶಗಳಿಗೂ ವಿಸ್ತರಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ನಗರ ಪ್ರದೇಶದಲ್ಲಿ ವಾಸಿಸುವ ಜನರಿಗೆ ಈ ಯೋಜನೆಯ ಪ್ರಯೋಜನ ಪಡೆಯಲು ಸರ್ಕಾರ ವಿಧಿಸುವ ನಿಬಂಧನೆಗಳೇನು ;

(ಇ) ಒಟ್ಟು ರಾಜ್ಯದಲ್ಲಿನ ನಗರ ಪ್ರದೇಶದಲ್ಲಿರುವ ಜನರು ಈ ಯೋಜನೆಯ ಪ್ರಯೋಜನ ಪಡೆಯಲು ಸರ್ಕಾರ ಸೂಕ್ತ ಪ್ರಚಾರ ಮಾಡಿದೆಯೇ ;

(ಈ) ಸದರಿ ವಿಮಾ ಯೋಜನೆಗೆ ಸಾರ್ವಜನಿಕರು ಭರಿಸಲಿರುವ ವಿಮಾ ಕಂತು ಸಾಮಾನ್ಯ ಬಡವರಿಗೆ ಹೊರೆಯಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯ ?

## ರೈತರಿಗೆ ಕಳಪೆ ಸೋಯಾಬಿನ್ ಬೀಜ ವಿತರಣೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೭ (೯೫೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯಲ್ಲಿ ಕೃಷಿ ಇಲಾಖೆ ವತಿಯಿಂದ ಕಂಪನಿಗಳು ರೈತರಿಗೆ ಕಳಪೆ ದರ್ಜೆಯ ಸೋಯಾಬಿನ್ ಬೀಜಗಳನ್ನು ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರ ಈ ಕಂಪನಿಗಳ ವಿರುದ್ಧ ಏನು ಕ್ರಮ ಕೈಗೊಂಡಿದೆ ;

(ಇ) ಬೀಜ ಖರೀದಿಸಿ ಮೋಸ ಹೋದ ರೈತರಿಗೆ ಸರ್ಕಾರ ಏನು ಪರಿಹಾರ ನೀಡಲಿದೆ ?

## ಬೆಳೆ ವಿಮೆ ಬಗ್ಗೆ ರೈತರಿಗೆ ಅಸಮರ್ಪಕ ಮಾಹಿತಿ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೮ (೯೫೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಬೆಳೆವಿಮೆ ಬಗ್ಗೆ ರೈತರಿಗೆ ಸರಿಯಾದ ಪ್ರಚಾರ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬೆಳೆ ವಿಮೆ ಕುರಿತು ಪ್ರಚುರಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಆ) ರಾಜ್ಯದಲ್ಲಿ ಯಾವ ಯಾವ ಬೆಳೆಗಳಿಗೆ ವಿಮಾ ಸೌಲಭ್ಯವನ್ನು ನೀಡಲಾಗುತ್ತಿದೆ; (ವಿವರ ಒದಗಿಸುವುದು) ;

(ಇ) ಬಾಕಿ ಉಳಿದ ಇತರೆ ಬೆಳೆಗಳಿಗೂ ವಿಮಾ ಸೌಲಭ್ಯವನ್ನು ವಿಸ್ತರಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಈ) ಕಳೆದ ವರ್ಷ ರೈತರಿಗೆ ನೀಡಬೇಕಾಗಿದ್ದ ವಿಮಾ ಬಾಕಿ ಮೊತ್ತವೆಷ್ಟು; ಈಗಾಗಲೇ ರೈತರಿಗೆ ನೀಡಿರುವ ವಿಮಾ ಮೊತ್ತವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಸದರಿ ಬಾಕಿ ವಿಮಾ ಮೊತ್ತವನ್ನು ಸರ್ಕಾರ ಯಾವ ಕಾಲಮಿತಿಯಲ್ಲಿ ಪಾವತಿ ಮಾಡಲು ಕ್ರಮ ಕೈಗೊಂಡಿದೆ ?

## ರಸ್ತೆಗಳಲ್ಲಿ ಟೋಲ್ ಸಂಗ್ರಹಣೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೧೯ (೯೦೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ರಸ್ತೆಗಳಿಗೆ ಟೋಲ್ ಸಂಗ್ರಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಹಾಗೂ ಟೋಲ್ ಸಂಗ್ರಹದ ವಿರುದ್ಧ ಸಾರ್ವಜನಿಕರು ಬೀದಿಗಿಳಿದು ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು; ಟೋಲ್ ಸಂಗ್ರಹವನ್ನು ಸ್ಥಗಿತಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಬದ್ಧವಿದೆಯೇ ;

(ಆ) ರಾಜ್ಯದಲ್ಲಿರುವ ಒಟ್ಟು ರಾಜ್ಯ ಹೆದ್ದಾರಿಗಳೆಷ್ಟು; ಇಂತಹ ರಾಜ್ಯ ಹೆದ್ದಾರಿಗಳು ಕೇಂದ್ರ ಸರ್ಕಾರದ ಸರ್ಫೇಸ್ ಟ್ರಾನ್ಸ್‌ಪೋರ್ಟ್ (ಭೂ ಸಾರಿಗೆ) ಇಲಾಖೆಯಡಿ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿ ಸಂಖ್ಯೆ ೧೨ ಗೋಟೂರು-ಕಾಗವಾಡ-ಬಿಜಾಪುರ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಮುಂದಿದೆಯೇ ?

## ರೈಲ್ವೆ ಲೆವೆಲ್ ಕ್ರಾಸಿಂಗ್‌ಗೆ ಪರ್ಯಾಯ ವ್ಯವಸ್ಥೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೭೨೦ (೯೦೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ನಗರದ ಸುಧಾ ಸರ್ಕಲ್ ಹತ್ತಿರ ರಾಷ್ಟ್ರೀಯ ಹೆದ್ದಾರಿ–೬೩ರಲ್ಲಿ ಬರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ನಿಂದಾಗಿ ವಾಹನ ಸಂಚಾರಕ್ಕೆ ಪದೇ ಪದೇ ತುಂಬಾ ತೊಂದರೆಯಾಗುತ್ತಿದ್ದು, ಈ ತೊಂದರೆ ತಪ್ಪಿಸಲು ಸರ್ಕಾರ ಪರ್ಯಾಯ ವ್ಯವಸ್ಥೆ ಕಲ್ಪಿಸುತ್ತದೆಯೇ ;

(ಆ) ಈ ಪರ್ಯಾಯ ವ್ಯವಸ್ಥೆಯು ಯಾವ ರೀತಿ ಇರುತ್ತದೆ ;

(ಇ) ಈ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಬೇಕಾಗುವ ಮೊತ್ತವೆಷ್ಟು ;

(ಈ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುತ್ತದೆ; ಮತ್ತು ಯಾವ ಕಾಲಮಿತಿಯಲ್ಲಿ ಪರಿಪೂರ್ಣಗೊಳಿಸಿ, ವಾಹನಗಳಿಗೆ ಮುಕ್ತ ಸಂಚಾರ ವ್ಯವಸ್ಥೆ ಕಲ್ಪಿಸಲಾಗುವುದು ?

## ದೋಷಪೂರಿತ ಹತ್ತಿ ಬೀಜ ಮಾರಾಟ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೨೧ (೯೧೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ದೋಷಪೂರಿತ ಕನಕ ಬಿಟಿ ಹತ್ತಿ ಬೀಜ ವಿತರಣೆ/ಮಾರಾಟದಿಂದ ರೈತರು ನಷ್ಟ ಹೊಂದಿರುವ ವಿಷಯ ಸರ್ಕಾರ ಗಮನಿಸಿದೆಯೇ ;

(ಆ) ಈ ದೋಷಪೂರಿತ ಬೀಜ ಮಾರಾಟ ಮಾಡಿದ ಮಾರಾಟಗಾರರು ಮತ್ತು ಕಂಪನಿ ವಿರುದ್ಧ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಈ ವಿಷಯದ ಕುರಿತು ಪೊಲೀಸ್ ಠಾಣೆಗಳಲ್ಲಿ ಏನಾದರೂ ದೂರುಗಳನ್ನು ಸರ್ಕಾರ ಅಥವಾ ರೈತರು ದಾಖಲಿಸಿದ್ದಾರೆಯೇ ;

(ಈ) ದೋಷಪೂರಿತ ಬೀಜ ಖರೀದಿಸಿ ನಷ್ಟಕೊಳ್ಳಗಾದ ರೈತರಿಗೆ ಸರ್ಕಾರ ಏನು ಪರಿಹಾರ ನೀಡಿದೆ (ತಾಲ್ಲೂಕುವಾರು ವಿವರ ನೀಡುವುದು) ?

## ಗ್ರಾಮಾಂತರ ಪ್ರದೇಶದ ಹಳ್ಳಿಗಳ ಸಂಪರ್ಕ ರಸ್ತೆಗಳ ದುರಸ್ತಿ

**ಶ್ರೀ ಮೃತ್ಯುಂಜಯ ಜಿಗನಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೨೨ (೯೧೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳನ್ನು ಸಂಪರ್ಕಿಸುವ ರಸ್ತೆಗಳು ತುಂಬಾ ಹಾಳಾಗಿದ್ದು, ಅವುಗಳ ಶೀಘ್ರ ದುರಸ್ತಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಆ) ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಏನಾದರೂ ಮೊತ್ತವನ್ನು ಮೀಸಲಿರಿಸಲಾಗುವುದೇ ; ಆ ಮೊತ್ತವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಹಾಳಾಗಿರುವ ಹಳ್ಳಿಗಳ ರಸ್ತೆಗಳನ್ನು ಯಾವ ಕಾಲಮಿತಿಯಲ್ಲಿ ದುರಸ್ತಿಗೊಳಿಸಲಾಗುವುದು ?

## ಅನಂತಶಯನಗುಡಿ ರೈಲ್ವೆ ಲೇವೆಲ್ ಕ್ರಾಸಿಂಗ್‌ಗೆ ಪರ್ಯಾಯ ವ್ಯವಸ್ಥೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :--**

೭೨೩ (೯೧೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹತ್ತಿರದ ಅನಂತಶಯನ ಗುಡಿ ಹತ್ತಿರವಿರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸರ್ಕಾರ ಯೋಚಿಸಿದೆಯೇ ;

(ಆ) ಈ ಕುರಿತು ಏನೇನು ಕ್ರಮಗಳನ್ನು ಕೈಗೊಂಡಿದೆ ; ಅವು ಯಾವ ಹಂತದಲ್ಲಿದೆ ;

(ಇ) ಈ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಅಂದಾಜಿಸಿರುವ ಮೊತ್ತವೆಷ್ಟು; ಪ್ರಸಕ್ತ ಈ ಉದ್ದೇಶಕ್ಕಾಗಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ ?

## ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಆರ್ಥಿಕ ಸಂಕಷ್ಟ ಸ್ಥಿತಿಯಲ್ಲಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೨೪ (೯೧೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅನೇಕ ನಗರಾಡಳಿತ, ಪಟ್ಟಣಗಳ ಸ್ಥಳೀಯ ಸಂಸ್ಥೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಇವುಗಳ ಆರ್ಥಿಕ ಸ್ಥಿತಿ ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಇದಕ್ಕಾಗಿ ಆವರ್ತ ನಿಧಿಯನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೇ;

(ಇ) ರಾಜ್ಯದ ಪಟ್ಟಣಗಳ ವ್ಯಾಪ್ತಿಯು ವಿಸ್ತಾರವಾದಂತೆ ಅವುಗಳ ಮೂಲಭೂತ ಸೌಲಭ್ಯದ ಕೊರತೆ ಉಂಟಾಗುತ್ತಿರುವುದು ನಿಜವೇ; ಈ ಪಟ್ಟಣ/ನಗರ ವಿಸ್ತಾರಕ್ಕೆ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗುವುದು;

(ಈ) ಹಾಗೆಯೇ, ವ್ಯಾಪ್ತಿ ವಿಸ್ತಾರವಾದಂತೆಲ್ಲ ನಗರಾಡಳಿತದಲ್ಲಿನ ಕಛೇರಿಗಳ ಖಾಲಿ ಹುದ್ದೆಗಳನ್ನು ಇದಕ್ಕೆ ಪೂರಕವಾಗಿ ಭರ್ತಿ ಮಾಡುವುದು ಸರ್ಕಾರದ ಜವಾಬ್ದಾರಿಯಲ್ಲವೇ; ಖಾಲಿ ಇರುವ ನಗರ ಸ್ಥಳೀಯಾಡಳಿತದಲ್ಲಿರುವ ಹುದ್ದೆಗಳ ವಿವರಗಳನ್ನು ನೀಡುವುದು;

(ಉ) ಖಾಲಿ ಇರುವ ಇಂತಹ ಸಾಕಷ್ಟು ಹುದ್ದೆಗಳನ್ನು ನೇಮಕ ಮಾಡಲು ಇರುವ ತೊಂದರೆಗಳೇನು; ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು (ಮಾಹಿತಿ ನೀಡುವುದು)?

## ಲೋಕೋಪಯೋಗಿ ಇಲಾಖೆಯಿಂದ ಅನುದಾನ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೨೫ (೯೧೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಗೆ ೨೦೧೨ರಿಂದ ೨೦೧೪ನೇ ಮೇ ತಿಂಗಳವರೆಗೆ ಲೋಕೋಪಯೋಗಿ ಇಲಾಖೆಯೂ ಮತ್ತು ಇನ್ನಿತರೆ ವಿವಿಧ

ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಬಂದಿರುವ ಒಟ್ಟು ಅನುದಾನ ಎಷ್ಟು; ಸಿ.ಆರ್.ಎಫ್. ಮತ್ತು ನಬಾರ್ಡ್‌ದಿಂದ ಎಷ್ಟು ಅನುದಾನ ನೀಡಲಾಗಿತ್ತು; (ಪ್ರತ್ಯೇಕ ಲೆಕ್ಕಶೀರ್ಷಿಕೆವಾರು, ವರ್ಷವಾರು ವಿವರವಾದ ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಲೋಕೋಪಯೋಗಿ ಇಲಾಖೆಗೆ ಈ ಕೆಳಕಂಡ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ೨೨೧೬, ೨೦೫೯, ೩೦೫೪, ೫೦೫೪, ೪೦೫೯, ೪೨೧೬ ಮತ್ತು ೮೪೪೩ ಹಾಗೂ ಇನ್ನಿತರೆ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾದ ಅನುದಾನವೆಷ್ಟು; ಯಾವ ಯಾವ ಲೆಕ್ಕಶೀರ್ಷಿಕೆಗೆ ಪ್ರತ್ಯೇಕವಾಗಿ ಎಷ್ಟು ಹಣ ಬಿಡುಗಡೆಯಾಗಿತ್ತು; (ಅಂಕಿ ಅಂಶಗಳೊಂದಿಗೆ ವರ್ಷವಾರು ವಿವರ ನೀಡುವುದು)

(ಇ) ಈ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ; ಆ ಕಾಮಗಾರಿಗಳು ಯಾವುವು; ಅದಕ್ಕೆ ತಗಲಿದ ವೆಚ್ಚವೆಷ್ಟು; (ಕಾಮಗಾರಿಗಳವಾರು ವಿವರ, ಕಾಮಗಾರಿಗಳು ಪೂರ್ಣಗೊಂಡಲ್ಲಿ ಅವುಗಳ ಅಂದಾಜು ಪಟ್ಟಿಯ ಪ್ರತಿ, ಕಾಮಗಾರಿ ಮುಗಿದಿದ್ದಲ್ಲಿ ಅಳತೆ ಪುಸ್ತಕದ ಪ್ರತಿ, ಬಿಲ್ಲಿನ ಪ್ರತಿ ಹಾಗೂ ಕಾಮಗಾಗಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಹೆಸರು, ಪ್ರತ್ಯೇಕ ಕಾಮಗಾರಿವಾರು ತಗುಲಿದ ವೆಚ್ಚ ಅಂಕಿ ಅಂಶಗಳೊಂದಿಗೆ ಕಾಮಗಾರಿವಾರು, ತಾಲ್ಲೂಕುವಾರು, ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)?

## ಲೋಕೋಪಯೋಗಿ ಅಭಿಯಂತರರು ಮತ್ತು ಸಾರ್ವಜನಿಕ ದೂರುಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೨೨೬ (೯೧೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲಾ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕಿರಿಯ ಅಭಿಯಂತರರು, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರ ಸಂಖ್ಯೆ ಎಷ್ಟು; (ಇವರುಗಳ ಹೆಸರು ಹಾಗೂ ಸ್ಥಳ ನಿಯುಕ್ತಿಯ ವಿವರ ನೀಡುವುದು)

(ಆ) ಈ ಅಧಿಕಾರಿಗಳ ಪೈಕಿ ಎಷ್ಟು ಜನರ ಮೇಲೆ ಸಾರ್ವಜನಿಕ ದೂರುಗಳು, ಭ್ರಷ್ಟಾಚಾರದ ಆರೋಪ, ಇಲಾಖಾ ವಿಚಾರಣೆಗಳು ಬಾಕಿಯಿವೆ; (ಇವರುಗಳ ಹೆಸರು ಮತ್ತು ಇವರ ಮೇಲೆ ಇರುವ ಆರೋಪಗಳ ವಿವರಗಳನ್ನು ಒದಗಿಸುವುದು)

(ಇ) ಈ ಪೈಕಿ ಎಷ್ಟು ಜನರ ಮೇಲೆ ಯಾವ ಯಾವ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ; ಇನ್ನು ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳುವುದು ಬಾಕಿ ಇದೆ; (ಇವರುಗಳ ಹೆಸರು ವಿವರಗಳನ್ನು ಒದಗಿಸುವುದು)

(ಈ) ಲೋಕೋಪಯೋಗಿ ಯೋಜನೆಗಳು ಯಾವುವು ; ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಗಳ ಅನುಷ್ಠಾನದಲ್ಲಿ ಶೇಕಡಾವಾರು ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ; (ಜಿಲ್ಲೆಯ ಎಲ್ಲಾ ವಿಭಾಗ/ ಉಪ ವಿಭಾಗ ಪ್ರತಿ ಕಛೇರಿಗಳವಾರು ವಿವರಗಳನ್ನು ಒದಗಿಸುವುದು)

(ಉ) ಈ ಯೋಜನೆಗಳ ಅನುಷ್ಠಾನದಲ್ಲಿ ಮೇಲ್ಕಂಡ ಪ್ರತಿಯೊಬ್ಬ ಎ ದರ್ಜೆಯಿಂದ ಡಿ ದರ್ಜೆ ನೌಕರರವರೆಗಿನ ಅಧಿಕಾರಿಗೆ ಇರುವ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳೇನು; ಬೀದರ್ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು (ಅವರ ಪದನಾಮ ಮತ್ತು ಹೆಸರುಗಳೊಂದಿಗೆ ಪೂರ್ಣ ಮಾಹಿತಿ ನೀಡುವುದು)?

## ಕೃಷಿಕರ ಬೆಳೆಗಳಿಗೆ ಬೆಂಬಲ ಬೆಲೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೨೭ (೯೧೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಕೃಷಿಕರ ಯಾವ ಯಾವ ಬೆಳೆಗೆ ಎಷ್ಟು ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗಿದೆ;

(ಆ) ಈ ಬೆಂಬಲ ಬೆಲೆ ನಿಗದಿಗೆ ಇರುವ ಮಾನದಂಡಗಳಾವುವು; ರಾಜ್ಯದ ಎಲ್ಲಾ ಬೆಳೆಗಳಿಗೂ ಒಂದೇ ತರಹದ ಬೆಂಬಲ ಬೆಲೆ ಇದೆಯೇ; (ತಾಲ್ಲೂಕುವಾರು ಮತ್ತು ಮಾರುಕಟ್ಟೆವಾರು ವಿವರ ನೀಡುವುದು)

(ಇ) ಇದರ ಅನುಷ್ಠಾನಕ್ಕಾಗಿ ವಿಶೇಷ ಬೆಲೆ ಆಯೋಗವನ್ನು ರಚಿಸಲು ಸರಕಾರವು ಮುಂದಾಗುವುದೇ; ಯಾವ ವಿಧಾನಗಳನ್ನು ಅನುಸರಿಸಲಿದೆ;

(ಈ) ಯಾವ ವರ್ಷಗಳಿಂದ ಬೆಲೆಗಳ ನಿಗದಿಗೆ ವಿಶೇಷ ಆಯೋಗ ಸ್ಥಾಪಿಸಲಿದೆ (ಮಾಹಿತಿ ನೀಡುವುದು)?

## ಹನಿ ನೀರಾವರಿ ಯೋಜನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೨೮ (೯೧೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯ ಬಗದಲ್‌ನಲ್ಲಿರುವ ತೋಟಗಾರಿಕೆ ಇಲಾಖೆಯ ರೈತ ಸಂಪರ್ಕ ಕೇಂದ್ರ ಕಛೇರಿಗೆ ೨೦೧೧ ರಿಂದ ೨೦೧೪ರ ಜೂನ್‌ವರೆಗೆ ಸರಕಾರದಿಂದ ಎಷ್ಟು ಹಣ ಮಂಜೂರು ಮಾಡಲಾಗಿದೆ; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ರೈತ ಸಂಪರ್ಕ ಕೇಂದ್ರದ ಅಧೀನದಲ್ಲಿ ಹನಿ ನೀರಾವರಿ ಯೋಜನೆಯಲ್ಲಿ ಖರ್ಚಾದ ಅನುದಾನ ಎಷ್ಟು; (ವಿವರ ನೀಡುವುದು)

(ಇ) ಖರ್ಚು ಮಾಡಿದ್ದಲ್ಲಿ, ಆ ರೈತ ಫಲಾನುಭವಿಗಳ ಹೆಸರು ಮತ್ತು ಪಟ್ಟಿ ಒದಗಿಸುವುದು; ಹಾಗೆ ಆ ರೈತರ ಜಮೀನಿನಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ; (ಪ್ರತಿ ವರ್ಷವಾರು ವಿವರ ನೀಡುವುದು) ?

## ಸಾವಯವ ತೋಟಗಾರಿಕೆ ಮತ್ತು ಕೃಷಿ ಹೊಂಡಗಳ ನಿರ್ಮಾಣ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೨೯ (೯೨೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು;

(ಆ) ಈ ಜಿಲ್ಲೆಗಳಲ್ಲಿ ಸಾವಯವ ತೋಟಗಾರಿಕೆ ಮತ್ತು ಕೃಷಿ ಹೊಂಡ ನಿರ್ಮಾಣಕ್ಕಾಗಿ ಕೈಗೊಳ್ಳಲಾದ ಕಾಮಗಾರಿಗಳು ಯಾವುವು; ಒದಗಿಸಲಾದ ಒಟ್ಟು ಅನುದಾನ ಮತ್ತು ಈವರೆವಿಗೆ ಮಾಡಲಾದ ವೆಚ್ಚದ ವಿವರಗಳನ್ನು ನೀಡುವುದು;

(ಇ) ತೋಟಗಾರಿಕೆ ಉತ್ಪನ್ನಗಳ ರಕ್ಷಣೆ, ಸಂಸ್ಕರಣೆ ಮತ್ತು ಮಾರಾಟಕ್ಕಾಗಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ ?

## ತೋಟಗಾರಿಕೆ ಇಲಾಖೆಯ ಅನುದಾನದ ನಿರ್ಬಳಕೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೩೦ (೯೧೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ತೋಟಗಾರಿಕೆ ಇಲಾಖೆಗೆ ೨೦೧೧–೧೨, ೨೦೧೨–೧೩ ಮತ್ತು ೨೦೧೩–೧೪ (ಮಾರ್ಚ್ ೨೦೧೪ರ ವರೆವಿಗೆ) ಸಾಲಿನಲ್ಲಿ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನಿಗದಿಪಡಿಸಲಾದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನವೆಷ್ಟು;

(ಆ) ಅದರಲ್ಲಿ, ಆಯಾ ವರ್ಷ ಭರಿಸಲಾದ ವೆಚ್ಚ ಮತ್ತು ನಿರ್ಬಳಕೆಯಾದ ಹಣದ ವಿವರಗಳನ್ನು ನೀಡುವುದು;

(ಇ) ನಿಗದಿತ ಅನುದಾನವು ಸಕಾಲದಲ್ಲಿ ವೆಚ್ಚವಾಗದೇ ಉಳಿಯಲು ಕಾರಣಗಳೇನು; ಬೇಜವಾಬ್ದಾರಿಯುತ ಅಧಿಕಾರಿಗಳ ವಿರುದ್ಧ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

(ಈ) ಕರ್ತವ್ಯ ಚ್ಯುತಿಯಿಂದ ದುರ್ನಡತೆ ಎಸಗುವ ಅಧಿಕಾರಿಗಳನ್ನು ನಿಯಮಗಳನುಸಾರ ಶಿಸ್ತು ಕ್ರಮಗಳಿಗೆ ಗುರಿಪಡಿಸಲಾಗುವುದೇ?

## ಕೃಷಿ ಇಲಾಖೆಯ ಅನುದಾನದ ನಿರ್ಬಳಕೆ

**ಡಾ॥ ಮತ್ತಿಕಟ್ಟೆ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೩೧ (೯೧೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ "ಅನ್ನದಾತ" ರೈತ ಬಾಂಧವ ಅವಿಶ್ರಾಂತವಾಗಿ ದುಡಿದು ಎಲ್ಲರಿಗೂ "ಅನ್ನಭಾಗ್ಯ" ಒದಗಿಸುತ್ತಿದ್ದರೂ ಕೃಷಿ ಯೋಜನೆಗಳಿಗಾಗಿ ನಿಗದಿತ ಅನುದಾನ, ಅಧಿಕಾರಿಗಳ ನಿರಾಸಕ್ತಿಯಿಂದಾಗಿ ನಿರ್ಬಳಕೆಯಾಗುತ್ತಿದ್ದು, ಕೃಷಿ ಕ್ಷೇತ್ರದ ಅಭಿವೃದ್ಧಿ ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕೃಷಿ ಕ್ಷೇತ್ರದ ಅಭಿವೃದ್ಧಿ ಯೋಜನೆಗಳಿಗಾಗಿ ೨೦೧೧-೧೨, ೨೦೧೨-೧೩ ಮತ್ತು ೨೦೧೩-೧೪ (ಮಾರ್ಚ್ ಅಂತ್ಯದವರೆವಿಗೆ) ರಲ್ಲಿ ನಿಗದಿತ ಅನುದಾನ ಮತ್ತು ಮಾಡಿದ ವೆಚ್ಚದ ವಿವರಗಳನ್ನು ನೀಡುವುದು;

(ಇ) ಕೃಷಿ ಇಲಾಖೆಯಲ್ಲಿನ ಒಟ್ಟು ಅಧಿಕಾರಿಗಳು ಮತ್ತು ಸಿಬ್ಬಂದಿ ಸಂಖ್ಯೆ ಎಷ್ಟು; ಅವರಿಗಾಗಿ ನೀಡುವ ಸಂಬಳ ಭತ್ಯೆ ಇತ್ಯಾದಿಗಳ ಒಟ್ಟು ಮೊತ್ತವೆಷ್ಟು; (ವಿವರಗಳನ್ನು ನೀಡುವುದು)

(ಈ) ಕೃಷಿ ಕ್ಷೇತ್ರಕ್ಕಾಗಿ ಇಷ್ಟೊಂದು ಸಿಬ್ಬಂದಿ ಇದ್ದಾಗ್ಯೂ ನಿಗದಿತ ಅನುದಾನದ ನಿರ್ಬಳಕೆಗೆ ಕಾರಣಗಳೇನು; ಪ್ರಸಕ್ತ ಸಾಲಿನಲ್ಲಿ ಸಕಾಲದಲ್ಲಿ ನಿಗದಿತ ಅನುದಾನವನ್ನು ಸದುಪಯೋಗಪಡಿಸಿಕೊಂಡು ಅನ್ನದಾತ ರೈತ ಬಾಂಧವರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು (ವಿವರಿಸುವುದು)?

## ಕೃಷಿ ಯಂತ್ರೋಪಕರಣಗಳ ಕೊರತೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೩೨ (೯೨೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಉತ್ತರ ಕರ್ನಾಟಕದಲ್ಲಿನ ರೈತರು ಕೃಷಿ ಯಂತ್ರೋಪಕರಣಗಳ ಕೊರತೆಯಿಂದಾಗಿ ತೊಂದರೆ ಅನುಭವಿಸುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ;

(ಆ) ಹಾಗಿದ್ದಲ್ಲಿ, ಈ ಭಾಗದ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ ಕೈಗೊಳ್ಳಲಾಗುತ್ತಿರುವ ಕ್ರಮಗಳೇನು;

(ಇ) ಈ ಭಾಗದ ಎಲ್ಲಾ ತಾಲ್ಲೂಕುಗಳಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುವುದೇ; ಹಾಗಿದ್ದಲ್ಲಿ, ಯಾವಾಗ?

## ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯಲ್ಲಿರುವ ಮೇಲ್ಸೇತುವೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೩೩ (೯೨೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಂಪೇಗೌಡ ಅಂತರಾಷ್ಟ್ರೀಯ ವಿಮಾಣ ನಿಲ್ದಾಣಕ್ಕೆ ತೆರಳಲು ಸುಗಮ ಸಂಚಾರ ದೃಷ್ಟಿಯಿಂದ ಮೇಲ್ಸೇತುವೆ (ಫ್ಲೈ ಓವರ್) ನಿರ್ಮಾಣವಾಗಿರುವುದು ಯಾವ ಸ್ಥಳದಿಂದ ಮತ್ತು ಎಲ್ಲಿಯವರೆವಿಗೆ; ಈ ಮೇಲ್ಸೇತುವೆ ಉದ್ದ ಎಷ್ಟು; ಇದನ್ನು ನಿರ್ಮಾಣ ಮಾಡಿದ ಸಂಸ್ಥೆ ಯಾವುದು; ಆಗಿರುವ ವೆಚ್ಚ ಎಷ್ಟು; (ಪ್ರತ್ಯೇಕವಾಗಿ ಸಂಪೂರ್ಣ ವಿವರ ಒದಗಿಸುವುದು)

(ಆ) ಮೇಲ್ಸೇತುವೆ ನಿರ್ಮಾಣ ಪ್ರಾರಂಭ ಸಂದರ್ಭದಲ್ಲಿ ಮತ್ತು ನಂತರದ ಬೆಳವಣಿಗೆಯಲ್ಲಿ ಇದರ ನಿರ್ವಹಣೆಯ ಕುರಿತಾಗಿ ಸರ್ಕಾರವು ರೂಪಿಸಿದ ಮಾರ್ಗಸೂಚಿಗಳು ಮತ್ತು ನಿರ್ಮಾಣ ಸಂಸ್ಥೆಯ ಜೊತೆ ಮಾಡಿಕ್ಕೊಂಡ ಕರಾರು ಒಪ್ಪಂದದ ಅಂಶಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಮೇಲ್ಸೇತುವೆ ನಿರ್ಮಾಣ ಸಂದರ್ಭದಲ್ಲಿ ಸ್ಥಳೀಯರು ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳದೇ ತಮ್ಮ ವಸತಿ ಬಡಾವಣೆಗಳಿಗೆ ತೆರಳುವ ನಾಗರೀಕರನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರತ್ಯೇಕ ರಸ್ತೆಗಳ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿತ್ತೇ; ಪ್ರಸ್ತುತ ಈ ಒಪ್ಪಂದ ಉಲ್ಲಂಘನೆಯಾಗಿರುವುದು ನಿಜವೇ; ಹಾಗಿದ್ದಲ್ಲಿ, ಈ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈ ನಿಟ್ಟಿನಲ್ಲಿ ಇದುವರೆಗೆ ಕೈಗೊಂಡ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಪ್ರಸ್ತುತ ಈ ಮೇಲ್ಸೇತುವೆಯನ್ನು ಉಪಯೋಗಿಸಲು ವಿಶೇಷ ಶುಲ್ಕ ಪಾವತಿಸಬೇಕಾದ ಅವಶ್ಯಕತೆ ಇದೆಯೇ; ಶುಲ್ಕ ಪಾವತಿಯಿಂದ ವಿನಾಯಿತಿಯನ್ನು ಯಾರಿಗಾದರೂ ನೀಡಲಾಗಿದೆಯೇ (ಹಾಗಿದ್ದಲ್ಲಿ, ಈ ಕುರಿತು ಮಾಹಿತಿ ಒದಗಿಸುವುದು) ?

## ತಂತಿ ಬಲೆಗಳ ಅಳವಡಿಕೆಯಿಂದ ಪಕ್ಷಿಗಳ ಸಾವು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೩೪ (೯೨೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳಿಗೆ ತಂತಿ ಬಲೆಗಳನ್ನು ಅಳವಡಿಸುತ್ತಿರುವುದು, ಇದರಿಂದಾಗಿ ವಿಭಿನ್ನ ಪ್ರಭೇದದ ಪಕ್ಷಿಗಳು ತಂತಿ ಬಲೆಗೆ ಸಿಲುಕಿ ಮರಣವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ತಂತಿ ಬಲೆಗಳನ್ನು ತಡೆಗಟ್ಟುವಲ್ಲಿ ಸರ್ಕಾರದ ಕ್ರಮಗಳೇನು; (ಮಾಹಿತಿ ನೀಡುವುದು)

(ಆ) ಈಗಾಗಲೇ ಅಳವಡಿಸಿರುವ ತಂತಿ ಬಲೆಗಳನ್ನು ತೆರವುಗೊಳಿಸಲು ಸರ್ಕಾರದ ಕ್ರಮಗಳೇನು?

## ಗುಲ್ಬರ್ಗಾ–ಶಹಾಬಾದ್ ರಸ್ತೆ ಕಾಮಗಾರಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೭೩೫ (೯೨೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ–ಶಹಾಬಾದ್ ರಸ್ತೆ ಕಾಮಗಾರಿ ಯಾವ ವರ್ಷದಲ್ಲಿ ಮಂಜೂರಾಗಿದೆ; ಮತ್ತು ಅದಕ್ಕೆ ಒದಗಿಸಿದ ಅನುದಾನವೆಷ್ಟು; ಈ ಕಾಮಗಾರಿ ಪ್ರಾರಂಭಿಸಿ ಇಲ್ಲಿಯವರೆಗೆ ಮಾಡಿರುವ ಖರ್ಚು ಎಷ್ಟು; (ವಿವರಿಸುವುದು)

(ಆ) ಕಳೆದ ೫ ದಶಕಗಳಲ್ಲಿ ೩೨ ಕಿ.ಮೀ. ರಸ್ತೆಗೆ ಸುಮಾರು ರೂ.೨೦೦ ಕೋಟಿ ಖರ್ಚು ಮಾಡಿರುವುದಾಗಿ ತಿಳಿದು ಬಂದಿದ್ದು, ಇದು ನಿಜವೇ; ಇಷ್ಟಾದರೂ ಕಾಮಗಾರಿ ಸಂಪೂರ್ಣವಾಗಿ ಸುಸ್ಥಿತಿಗೆ ಬರದಿರಲು ಕಾರಣವೇನು; (ವಿವರಿಸುವುದು)

(ಇ) ಕಳೆದ ೫ ದಶಕಗಳಿಂದ ಗುಲ್ಬರ್ಗಾ–ಶಹಾಬಾದ್ ರಸ್ತೆ ಕಾಮಗಾರಿಗಾಗಿ ಯಾವ ಯಾವ ಮೂಲಗಳಿಂದ ಯಾವ ವರ್ಷದಲ್ಲಿ ಎಷ್ಟು ಅನುದಾನ ಸಂಗ್ರಹಣೆ ಮಾಡಲಾಗಿದೆ ಮತ್ತು ಬಳಕೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಗುಲ್ಬರ್ಗಾ–ಶಹಾಬಾದ್–ವಾಡಿ ರಸ್ತೆ ಹೊಸ ಹೆದ್ದಾರಿ (NH) ಎನ್.ಹೆಚ್.೧೫೦ ಯನ್ನಾಗಿ ಘೋಷಣೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಈ ರಸ್ತೆ ಮೇಲ್ದರ್ಜೆಗೇರಿಸಿ (NHAI) ಎನ್.ಹೆಚ್.ಎ.ಐ.ಗೆ ಹಸ್ತಾಂತರಿಸುವುದು ಯಾವಾಗ (ವಿವರ ನೀಡುವುದು)?

## "ಕೃಷಿ ಮಾಹಿತಿ ಅಭಿಯಾನ"

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೭೩೬ (೯೨೭) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಂಗಾರು ಹಂಗಾಮು ಪ್ರಾರಂಭವಾಗಿದ್ದು ರೈತರಿಗೆ ಬಿತ್ತನೆಗೆ ಸಂಬಂಧಿಸಿದಂತೆ ಮಾಹಿತಿ ನೀಡಲು "ಕೃಷಿ ಮಾಹಿತಿ ಅಭಿಯಾನ" ಕಾರ್ಯಕ್ರಮ ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಹಮ್ಮಿಕೊಳ್ಳುವ ಮೂಲಕ ಪ್ರಚಾರ ಆಂದೋಲನ ಕೈಗೊಳ್ಳಲಾಗಿದೆಯೇ; ಯಾರ ನೇತೃತ್ವದಲ್ಲಿ ಚಾಲನೆ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಯೋಜನೆಯು ಪ್ರಚಾರ ಆಂದೋಲನಾ ಕಾರ್ಯಕ್ರಮವು ಇಲಾಖೆಯಿಂದ ಕೈಗೊಳ್ಳಲಾಗಿದೆಯೇ ಅಥವಾ ಸರ್ಕಾರವು ಗುರುತಿಸಿದ ಏಜೆನ್ಸಿ ಮೂಲಕ ಕೈಗೊಳ್ಳಲಾಗಿದೆಯೇ; (ವಿವರ ನೀಡುವುದು)

(ಇ) ಈ ಯೋಜನೆಯು ಅನುಷ್ಠಾನಕ್ಕಾಗಿ ಸರ್ಕಾರವು ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು; ಅದನ್ನು ಸಮರ್ಪಕ/ಯೋಜನಾ ಬದ್ಧವಾಗಿ ಬಳಕೆ ಮಾಡಲಾಗುತ್ತಿದೆಯೇ;

(ಈ) ಈ ಯೋಜನೆ ಮೇಲುಸ್ತುವಾರಿಗಾಗಿ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳನ್ನು ನೇಮಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ರ್‍ಯಾಂಕಿನ ಅಧಿಕಾರಿಗಳನ್ನು ನೇಮಿಸಲಾಗಿದೆ (ವಿವರ ನೀಡುವುದು)?

## ವಿದ್ಯುತ್ ಬಿಲ್ ಪಾವತಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೭೩೭ (೯೨೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಎಷ್ಟು; ಬೇಡಿಕೆಯ ಪ್ರಮಾಣ ಎಷ್ಟು; ಪೂರೈಕೆಯಾಗುತ್ತಿರುವ ವಿದ್ಯುತ್ ಎಷ್ಟು ; (ವಿವರಿಸುವುದು)

(ಆ) ರಾಜ್ಯದಲ್ಲಿ ವಿದ್ಯುತ್ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸೋರಿಕೆ ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ; (ವಿವರಿಸುವುದು)

(ಇ) ೨೦೨೧ರ ಜನಗಣತಿಯ ಜನಸಂಖ್ಯೆ ಆಧರಿಸಿ ವಿದ್ಯುತ್ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮವಾಗಿ ಸರ್ಕಾರವು ಪೂರ್ವ ಸಿದ್ಧತೆ ಯೋಜನೆಗಳು ರೂಪಿಸಿದೆಯೇ; ಅವುಗಳು ಯಾವುವು; (ವಿವರಿಸುವುದು)

(ಈ) ರಾಜ್ಯದಲ್ಲಿ ವಿದ್ಯುತ್ ಬಿಲ್ಲು ಪಾವತಿಗಾಗಿ ಬಾಕಿ ಇರುವ ವ್ಯಕ್ತಿ ಮತ್ತು ಸಂಸ್ಥೆಗಳು ಯಾವುವು; ಅದರಲ್ಲಿ ರೂ. ೧.೦೦ ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವುಗಳು ಯಾವುವು; ವಸೂಲು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರಿಸುವುದು)?

## ಒಣಗುತ್ತಿರುವ ತೋಟಗಳ ಪುನರುಜ್ಜೀವನ

**ಶ್ರೀ ಸಿ.ಎಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೩೮ (೯೦೨) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆ, ಬೇಲೂರು ತಾಲ್ಲೂಕುಗಳ ಈ ಭಾಗದಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ಅಡಿಕೆ, ತೆಂಗು, ಮಾವಿನ ತೋಟಗಳು ಇತ್ತೀಚಿನ ದಿನಗಳಲ್ಲಿ ಸಂಪೂರ್ಣ ಒಣಗಿ ಹೋಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೆಳೆದು ನಿಂತ ತೋಟಗಳನ್ನು ಉಳಿಸಿಕೊಳ್ಳಲಾಗದೆ ಕಂಗಾಲಾದ ರೈತ ಅನ್ಯ ಮಾರ್ಗವಿಲ್ಲದೆ ಸಾಮೂಹಿಕವಾಗಿ ಅಡಿಕೆ ಮರ ಹಾಗೂ ತೆಂಗಿನ ಮರಗಳನ್ನು ಬುಡ ಸಮೇತ ಕತ್ತರಿಸಿ ಹಾಕುತ್ತಿರುವ ಈ ಸಂದರ್ಭದಲ್ಲಿ ರೈತರ ಜೀವನಾಡಿಯಾದ ಈ ತೋಟಗಳನ್ನು ಉಳಿಸಿಕೊಳ್ಳಲು ಸರ್ಕಾರದ ಮುಂದಿರುವ ತುರ್ತು ಯೋಜನೆಗಳೇನು;

(ಇ) ಈ ಭಾಗದ ತೋಟಗಳು ಸಾಮೂಹಿಕವಾಗಿ ನೀರಿಲ್ಲದೆ ಒಣಗಿ ಸಂಪೂರ್ಣ ನಾಶವಾಗುತ್ತಿದ್ದರೂ ತೋಟಗಾರಿಕಾ ಇಲಾಖಾ ತೋಟಗಳನ್ನು ಉಳಿಸಿಕೊಳ್ಳಲು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳದೆ ಕಣ್ಮುಚ್ಚಿ ಕುಳಿತುಕೊಂಡಿರಲು ಕಾರಣಗಳೇನು;

(ಈ) ಈಗಾಗಲೇ ಕಣ್ಮುಂದೆ ಒಣಗಿ ಹೋಗಿರುವ ಹಾಗೂ ಸಂಪೂರ್ಣ ನಾಶವಾಗಿರುವ ತೋಟಗಳಿಗೆ ಸರ್ಕಾರ ನೀಡಿದ ಪರಿಹಾರದ ಮೊತ್ತವೇನು (ಸಂಪೂರ್ಣ ವಿವರಗಳನ್ನು ಒದಗಿಸುವುದು)?

## ಸ್ಥಳೀಯ ಸಂಸ್ಥೆಗಳು ತೆರಿಗೆಯೊಂದಿಗೆ ವಸೂಲು ಮಾಡಿದ ಗ್ರಂಥಾಲಯ ಸೆಸ್

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೭೩೯ (೯೩೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರದ ಸ್ಥಳೀಯ ಸಂಸ್ಥೆಗಳು ಪ್ರತಿ ವರ್ಷ ಆಸ್ತಿ ತೆರಿಗೆ ಜೊತೆಗೆ ಕಡ್ಡಾಯವಾಗಿ ವಸೂಲು ಮಾಡುತ್ತಿರುವ ಗ್ರಂಥಾಲಯ ತೆರಿಗೆಯ ಶೇಕಡ ಮೊತ್ತವೆಷ್ಟು;

(ಆ) ಸ್ಥಳೀಯ ಸಂಸ್ಥೆಗಳಿಂದ ಅಂದರೆ ಮಹಾನಗರ ಸಭೆ, ಮಹಾನಗರ ಪಾಲಿಕೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳು ವಸೂಲು ಮಾಡಿದ ತೆರಿಗೆಯ ಮೊತ್ತದಲ್ಲಿ ಗ್ರಂಥಾಲಯ ಇಲಾಖೆಗೆ ಭರಿಸಲು ಬಾಕಿ ಇರುವ ಸೆಸ್ ಮೊತ್ತವೆಷ್ಟು ; (ವರ್ಷವಾರು, ಪ್ರತಿಯೊಂದು ಸಂಸ್ಥೆಯ ಮಾಹಿತಿ ನೀಡುವುದು)

(ಇ) ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ಸೆಸ್ ವಸೂಲು ಮಾಡಿ, ಗ್ರಂಥಾಲಯಗಳಿಗೆ ಬಿಡುಗಡೆ ಮಾಡದಿರಲು ಕಾರಣಗಳೇನು; ಇದು ತಪ್ಪಲ್ಲವೆ;

(ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ೫ ವಲಯಗಳ ೧೮೦ ಗ್ರಂಥಾಲಯಗಳಿಗೆ, ಹಣಕಾಸಿನ ಮುಗ್ಗಟ್ಟಿನಿಂದ ದಿನಪತ್ರಿಕೆಗಳ ಸರಬರಾಜು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

(ಉ) ತಕ್ಷಣ ರಾಜ್ಯದಲ್ಲಿಯ ಎಲ್ಲ ಗ್ರಂಥಾಲಯಗಳಿಗೆ ಆದರ ಪಾಲಿಗೆ ಬರುವ ಹಣ ಬಿಡುಗಡೆ ಮಾಡಲು ತಕ್ಷಣ ಕ್ರಮ ಕೈಗೊಳ್ಳಲಾಗುವುದೇ?

## ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನೆ ಸಂಸ್ಥೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೭೪೦ (೯೩೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇಡೀ ರಾಜ್ಯದಲ್ಲಿ ಸಕ್ಕರೆ ಉದ್ದಿಮೆ ಹಾಗೂ ಕಬ್ಬು ಬೆಳೆಗಾರರ ಪಾಲಿಗೆ ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನೆ ಸಂಸ್ಥೆ ಯಾವ ವರ್ಷದಲ್ಲಿ ಪ್ರಾರಂಭವಾಗಿದೆ; ಅದರ ಉದ್ದೇಶಗಳೇನು; ಇಲ್ಲಿಯವರೆಗೆ ಆದ ಪ್ರಗತಿ ಏನು; (ಸಂಪೂರ್ಣ ಮಾಹಿತಿಯೊಂದಿಗೆ)

(ಆ) ಮಾದರಿ ಸಂಶೋಧನೆ ಕೇಂದ್ರವಾಗಬೇಕಾಗಿದ್ದ ಇದಕ್ಕೆ ಸರ್ಕಾರ ಯಾವುದೇ ರೀತಿಯಿಂದ ಅನುಕೂಲತೆಗಳನ್ನು ಕಲ್ಪಿಸದಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು;

(ಇ) ಉದ್ದೇಶಿತ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಕಟ್ಟಡ ಎಲ್ಲಿ ಕಟ್ಟಲಾಗಿದೆ; ಸ್ಥಳ ಯಾವುದು; ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಇಲ್ಲಿ ಕೆಲಸ ಮಾಡುತ್ತಿರುವ ನೌಕರರು ಎಷ್ಟು; ಅವರ ಹುದ್ದೆಗಳು ಯಾವುವು ಮತ್ತು ಈಗ ಈ ಸಂಖ್ಯೆ ಬರೀ ವಿಚಾರ ಸಂಕೀರ್ಣಕ್ಕೆ ಮಾತ್ರ ಸೀಮಿತವಾಗಿರುವುದು ನಿಜವೆ;

(ಈ) ಸದರಿ ಕಟ್ಟಡವನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆಯೆ; ಸ್ಥಳಾಂತರಿಸಿದ್ದರೆ ಎಲ್ಲಿಗೆ, ಕಾರಣವೇನು?

**ಶರಾವತಿ ಸೇತುವೆಯ ಟೋಲ್ ವಸೂಲಾತಿ**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೭೪೧ (೯೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಷ್ಟ್ರೀಯ ಹೆದ್ದಾರಿ ನಂಬರ್ ೧೭ ರಲ್ಲಿ ಹೊನ್ನಾವರ ಸೇತುವೆ ದಾಟಿದ ಮೇಲೆ ವಸೂಲು ಮಾಡುತ್ತಿರುವ ಟೋಲ್ (ಶುಲ್ಕ)ದ ವಸೂಲಾತಿಯನ್ನು ಯಾವ ದಿನಾಂಕದಿಂದ ಪ್ರಾರಂಭಿಸಲಾಗಿದೆ ಹಾಗೂ ಅದರ ಗುತ್ತಿಗೆಯನ್ನು ಯಾರಿಗೆ ವಹಿಸಲಾಗಿದೆ; (ಅವರ ಪೂರ್ಣ ಹೆಸರು ವಿಳಾಸ ತಿಳಿಸುವುದು)

(ಆ) ಟೋಲ್ (ಶುಲ್ಕ) ವಸೂಲು ಮಾಡುವ ಅವಧಿ ಯಾವ ದಿನಾಂಕದಂದು ಮುಗಿದಿದೆ;

(ಇ) ಅವಧಿ ಮುಗಿದರೂ ಇನ್ನೂ ಶುಲ್ಕ ವಸೂಲಿ ಮಾಡುವುದು ದಿನ ನಿತ್ಯ ನಡೆಯಲು ಕಾರಣವೇನು; ಅವಧಿ ಮುಗಿದ ನಂತರವೂ ಶುಲ್ಕ ವಸೂಲಿ ಮಾಡುವುದು ಕಾನೂನು ಬಾಹಿರವಲ್ಲವೇ;

(ಈ) ಟೋಲ್ (ಶುಲ್ಕ) ವಸೂಲು ಮಾಡುವುದನ್ನು ತಕ್ಷಣ ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಕೃಷಿ ಇಲಾಖೆಯಿಂದ ನಿರ್ವಹಿಸಲ್ಪಡುವ ಫಾರಂಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೪೨ (೯೩೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಫಾರಂಗಳ ಸಂಖ್ಯೆ ಎಷ್ಟು ; ಯಾವುವು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಸದರಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಫಾರಂಗಳಿಗೆ ಮಂಜೂರಾದ ಹುದ್ದೆಗಳೆಷ್ಟು ಮತ್ತು ಕೊರತೆ ಇರುವ ಹುದ್ದೆಗಳೆಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಫಾರಂವಾರು, ಹುದ್ದೆವಾರು ವಿವರ ನೀಡುವುದು) ;

(ಇ) ಈ ಘಾರಂಗಳು ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಇಲಾಖೆ ತೆಗೆದುಕೊಂಡ ತುರ್ತು ಕ್ರಮಗಳೇನು ?

## ದ.ಕ. ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನಶ್ಚೇತನ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೪೩ (೯೩೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದ.ಕ. ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕೆ ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು;

(ಆ) ದ.ಕ. ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಬ್ಬು ಅರೆಯುವಿಕೆ ಕಾರ್ಯನಿರ್ವಹಿಸದೇ ಇರುವುದರಿಂದ ಉಡುಪಿ ಹಾಗೂ ದ.ಕ. ಜಿಲ್ಲೆಯ ಸಾಕಷ್ಟು ರೈತರು ಕೃಷಿ ಕಾಯಕವನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಕಾರ್ಖಾನೆಯನ್ನು ಪುನಶ್ಚೇತನ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

(ಇ) ರಾಜ್ಯದಲ್ಲಿ ಪ್ರಸ್ತುತ ಕಬ್ಬಿಗೆ ಉತ್ತಮ ಧಾರಣೆಯಿದ್ದು, ಕಬ್ಬು ಲಾಭದಾಯಕ ಬೆಳೆಯಾಗಿರುವುದರಿಂದ ವರಾಹಿ ನೀರಾವರಿ ಯೋಜನೆಯಿಂದ ನೀರಾವರಿಯಾಗುವ ಹದಿನೆಂಟು ಸಾವಿರ ಎಕರೆಯಷ್ಟು ಭೂಮಿಯು ಕಬ್ಬಿನ ಕೃಷಿಗೆ ಲಭ್ಯವಾಗುವುದರಿಂದ ಸಕ್ಕರೆ ಕಾರ್ಖಾನೆ ಪುನಶ್ಚೇತನದ ಬಗ್ಗೆ ರೈತರು ನಿರೀಕ್ಷೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

**ತೋಟಗಾರಿಕಾ ಇಲಾಖೆಯಿಂದ ನಿರ್ವಹಿಸಲ್ಪಡುವ ಫಾರಂಗಳು**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೪೪ (೯೩೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ತೋಟಗಾರಿಕಾ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ತೋಟಗಾರಿಕಾ ಫಾರಂಗಳು ಎಷ್ಟು ; ಮತ್ತು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ತೋಟಗಾರಿಕಾ ಫಾರಂಗಳಿಗೆ ಮಂಜೂರಾದ ಹುದ್ದೆಗಳೆಷ್ಟು ; ಮತ್ತು ಕೊರತೆ ಇರುವ ಹುದ್ದೆಗಳೆಷ್ಟು; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಫಾರಂವಾರು, ಹುದ್ದೆವಾರು ವಿವರ ನೀಡುವುದು) ;

(ಇ) ಸದರಿ ಜಿಲ್ಲೆಗಳಲ್ಲಿ ತೋಟಗಾರಿಕಾ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿರುವ ಫಾರಂಗಳು ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಇಲಾಖೆ ತೆಗೆದುಕೊಂಡ ತುರ್ತು ಕ್ರಮಗಳೇನು ?

## ಮೆಸ್ಕಾಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈನ್‌ಮೆನ್‌ಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೪೫ (೯೩೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೆಸ್ಕಾಂನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲೈನ್‌ಮೆನ್‌ಗಳ ಸಂಖ್ಯೆ ಎಷ್ಟು ; ಕೊರತೆ ಇರುವ ಲೈನ್‌ಮೆನ್‌ಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಜ್ಯದಲ್ಲಿ ಲೈನ್‌ಮೆನ್‌ಗಳ ನೇಮಕಾತಿಯಲ್ಲಿ ಸರ್ಕಲ್ (ವೃತ್ತ) ಅಥವಾ ವಿಭಾಗದ ನೆಲೆಯಲ್ಲಿ ನೇಮಕಾತಿ ಮಾಡುವುದರಿಂದ ಶಾಶ್ವತ ಸಿಬ್ಬಂದಿ ಕೊರತೆಯನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲವೇ ; ಸಾಧ್ಯವಿದ್ದಲ್ಲಿ, ಮೇಲಿನ ಕ್ರಮದಲ್ಲಿ ನೇಮಕಾತಿ ಮಾಡಲಾಗುವುದೇ ; ಇಲ್ಲವಾದಲ್ಲಿ, ಕಾರಣವೇನು ?

## ಬಿತ್ತನೆ ಬೀಜಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೪೬ (೯೩೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ೨೦೧೩ ಮತ್ತು ೨೦೧೪ನೇ ಸಾಲಿನಲ್ಲಿ ಎಷ್ಟು ರೈತರಿಗೆ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ ;

(ಆ) ವಿತರಿಸಲಾದ ಬಿತ್ತನೆ ಬೀಜಗಳು ಯಾವುವು ; ಯಾವ ಕಂಪನಿಗಳ ಬೀಜಗಳನ್ನು ರೈತರಿಗೆ ವಿತರಿಸಲು ಕೃಷಿ ಇಲಾಖೆಯ ಅಧಿಕಾರಿಗಳು ಶಿಫಾರಸ್ಸು ಮಾಡಿದ್ದಾರೆ ;

(ಇ) ಕಳಪೆ ಮತ್ತು ನಕಲಿ ಬೀಜಗಳನ್ನು ರೈತರಿಗೆ ಪೂರೈಕೆ ಮಾಡಿ ರೈತರು ಹಾನಿ ಅನುಭವಿಸಿದ ಪ್ರಕರಣಗಳು ವರದಿಯಾಗಿವೆಯೇ ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು ?

## ಮೌಲ್ವಿಗಳಿಗೆ ಮಾಸಿಕ ಗೌರವಧನ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೭೪೭ (೯೪೨) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಸೀದಿಗಳಲ್ಲಿ ಪೂಜೆ ನಡೆಸುವ ಮೌಲ್ವಿಗಳಿಗೆ ಮಾಸಿಕ ಗೌರವ ಧನ ನೀಡಲು ಸರ್ಕಾರವು ಮುಂದಾಗಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಒಟ್ಟು ಎಷ್ಟು ಮಸೀದಿಗಳಿವೆ ; ಸದರಿ ಗೌರವ ಧನ ಯೋಜನೆಗೆ ಆಯ್ದುಕೊಂಡಿರುವ ಮಸೀದಿಗಳೆಷ್ಟು ;

(ಇ) ಆಯ್ದುಕೊಳ್ಳಲು ಪರಿಗಣಿಸಿರುವ ಮಾನದಂಡಗಳೇನು ; ಗೌರವ ಧನ ನೀಡುವ ಮಸೀದಿಗಳನ್ನು ಸರ್ಕಾರವು ಮುಜರಾಯಿ ಇಲಾಖೆಯಲ್ಲಿ ದೇವಾಲಯಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವ ರೀತಿ ತೆಗೆದುಕೊಳ್ಳುವುದೇ ;

(ಈ) ಸದರಿ ಮಸೀದಿಗಳಿಗೆ ಯಾವುದಾದರೂ ನಿಯಮಗಳನ್ನು ರೂಪಿಸಿದೆಯೇ (ವಿವರ ನೀಡುವುದು) ?

## ಮರಳಿನ ಸಂಗ್ರಹದ ರಾಜಸ್ವ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೭೪೮ (೯೭೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(೧) ಬಿಜಾಪೂರ ಜಿಲ್ಲೆಯಲ್ಲಿನ ಎಲ್ಲಾ ತಾಲ್ಲೂಕುಗಳಲ್ಲಿ ಮರಳಿನ ಬಾಬತ್ತಿನಲ್ಲಿ ಸಂಗ್ರಹಿಸಿರುವ ರಾಜಸ್ವದ ಮೊತ್ತ ಎಷ್ಟು ;

(ಅ) ಕಳೆದ ೦೬ ತಿಂಗಳ ವಿವರವನ್ನು ತಾಲ್ಲೂಕುವಾರು ನೀಡುವುದು;

(ಆ) ರಾಜಸ್ವ ಸಂಗ್ರಹದ ಪದ್ಧತಿ ಏನು ;

(ಇ) ನಿಯಮಗಳೇನು (ಸಂಪೂರ್ಣ ವಿವರ ನೀಡುವುದು) ;

(೨) ಶಾಸಕರ ನಿಧಿಯಿಂದ ನಿರ್ಮಾಣ ಮಾಡುತ್ತಿರುವ ಕಾಮಗಾರಿಗಳಿಗೆ ಎಷ್ಟು ಮೊತ್ತದ ಹಣವನ್ನು ಯಾವ ಯಾವ ಬಾಬತ್ತಿನಲ್ಲಿ ಕಡಿತಗೊಳಿಸಲಾಗುತ್ತಿದೆ ;

(ಅ) ಬಿಜಾಪೂರ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕಳೆದ ೦೨ ವರ್ಷಗಳಲ್ಲಿ ಈ ರೀತಿ ಕಡಿತಗೊಳಿಸಿದ ಹಣದ ಮೊತ್ತವೆಷ್ಟು (ಬಾಬತ್ತಿನವಾರು ವಿವರ ನೀಡುವುದು) ?

## ಪುರಸಭೆ ಮತ್ತು ಪಟ್ಟಣ ಪಂಚಾಯ್ತಿ ಯೋಜನೆಗಳು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೭೪೯ (೯೪೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪೂರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳು ಕಳೆದ ೦೩ ವರ್ಷಗಳಲ್ಲಿ ಯಾವ

ಯಾವ ಬಾಬತ್ತಿನ ಅಡಿ ಯಾವ ಯಾವ ಯೋಜನೆಗಳನ್ನು ತೆಗೆದುಕೊಳ್ಳಲಾಗಿತ್ತು ; ಅವುಗಳ ಸ್ಥಿತಿಗತಿ ಏನು ;

(ಆ) ಆ ಪ್ರತಿ ವರ್ಷದ ಅಭಿವೃದ್ಧಿ ಕಾಮಗಾರಿಗೆ ವಿನಿಯೋಗಿಸಿದ ಹಣ, ಕೈಗೊಂಡ ಕಾಮಗಾರಿ ಅದರ ಸ್ಥಿತಿಗತಿ ಈವರೆಗಿನ ವರದಿ ನೀಡುವುದು ;

(ಇ) ಸಿಂದಗಿ ಮತ್ತು ಇಂಡಿ ಪುರಸಭೆಯು ಕಳೆದ ೦೩ ವರ್ಷಗಳಿಂದ ಪ್ರತಿ ಬಾಬತ್ತಿನ ಅಡಿ ತೆಗೆದುಕೊಂಡ ಅಭಿವೃದ್ಧಿ ಕಾಮಗಾರಿಗಳು ಯಾವುವು (ಕಾಮಗಾರಿಗಳ ಸ್ಥಿತಿಗತಿ, ನೀಡಿರುವ ಬಿಲ್‌ಗಳು ಸಂಪೂರ್ಣ ವಿವರ ನೀಡುವುದು) ?

## ಹಾಲು ಒಕ್ಕೂಟ ರಚನೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)** ( ಸ್ಥಳೀಯ ಸಂಸ್ಥೆಗಳ **ಕ್ಷೇತ್ರದಿಂದ ಚುನಾಯಿತರಾದವರು)** :-

೭೫೦ (೯೪೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ ರಚನೆಗೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ ; ಇದಕ್ಕಾಗಿ ಒದಗಿಸಿರುವ ಆಯವ್ಯಯ ಎಷ್ಟು ; ಈ ಒಕ್ಕೂಟ ಸ್ಥಾಪನೆ ಅಗತ್ಯವಾದ ಭೂಮಿಯನ್ನು ಗುರುತಿಸಲಾಗಿದೆಯೇ ; ಪ್ಲಾಂಟ್ ಸ್ಥಾಪನೆ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆಯೇ (ವಿವರ ಒದಗಿಸುವುದು) ;

(ಆ) ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟು; ಸ್ವಂತ ಕಟ್ಟಡ ಹೊಂದಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು

; ಸ್ವಂತ ಕಟ್ಟಡ ನಿರ್ಮಾಣಕ್ಕೆ ಸಹಕಾರ ಸಂಘಗಳಿಗೆ ಸಾಲ/ ನೆರವು ಒದಗಿಸಲಾಗಿದೆಯೇ ;

(ಇ) ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೆಚ್ಚು ಮಾಡಲು, ಗಿರಿಜನರಿಗೆ ಪಶುಸಂಗೋಪನೆ ಕೈಗೊಂಡು ಹಾಲು ಉತ್ಪಾದಿಸುವಂತೆ ಮಾಡಲು ಕೈಗೊಂಡಿರುವ ಕ್ರಮಗಳೇನು ; ಗಿರಿಜನರ ಹಾಡಿಗಳಿಗೆ ಸಮೀಪದಲ್ಲಿ ಹಾಲು ಉತ್ಪಾದಕರ ಸಂಘಗಳನ್ನು ಸ್ಥಾಪಿಸಲಾಗುವುದೇ ;

(ಈ) ಜಿಲ್ಲೆಯ ಹಾಲು ಉತ್ಪಾದನಾ ಪ್ರಮಾಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ; ಇದನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು ?

## ಮೈಸೂರಿನಲ್ಲಿ ನೂತನ ಹಾಲಿನಪುಡಿ ಘಟಕದ ಸ್ಥಾಪನೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೫೧ (೯೭೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರಿನಲ್ಲಿ ನೂತನ ಹಾಲಿನ ಪುಡಿ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಕೈಗೊಂಡಿರುವ ಕ್ರಮಗಳೇನು ;

(ಆ) ಕೇಂದ್ರದ ಸಹಾಯದಿಂದ ಮೇವು ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗಿದೆಯೇ ; ಮೈಸೂರು ಜಿಲ್ಲೆಯಲ್ಲಿ/ಚಾಮರಾಜನಗರ ಜಿಲ್ಲೆಯಲ್ಲಿ ಮೇವು ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಯಾವುವು ;

(ಇ) ಮೇವು ಅಭಿವೃದ್ಧಿಗೆ ಅಗತ್ಯವಾದ ಮಿನಿಕಿಟ್‌ಗಳನ್ನು ರೈತರಿಗೆ ವಿತರಿಸಲಾಗಿದೆಯೇ ; ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಜನ ರೈತರಿಗೆ (ಹಾಲು ಉತ್ಪಾದಕರಿಗೆ) ಈ ಮಿನಿಕಿಟ್‌ಗಳನ್ನು ವಿತರಿಸಲಾಗಿದೆ ?

## ಸಿಂಡಿಕೇಟ್ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೫೨ (೯೪೭) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದ ಮಾಗಡಿ ರಸ್ತೆಯ ಹೇರೋಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಸಿಂಡಿಕೇಟ್ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯು ದಿನಾಂಕ: ೧೯-೦೪-೧೯೭ರಂದು ಹೇರೋಹಳ್ಳಿ ಗ್ರಾಮ ಪಂಚಾಯತ್ ಯಿಂದ ಮಂಜೂರಾಗಿದೆಯೇ ; ಈ ಮಂಜೂರಾದ ನಕ್ಷೆಯ ಪ್ರಕಾರ ರಚಿಸಲಾಗಿರುವ ವಿವಿಧ ಅಳತೆಯ ನಿವೇಶನಗಳ ಸಂಖ್ಯೆ ಎಷ್ಟು ; ನಾಗರೀಕ ಸೌಲಭ್ಯಗಳಿಗೆ ಮೀಸಲಿಟ್ಟಿರುವ ನಿವೇಶನಗಳ ಸಂಖ್ಯೆ ಎಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು) ಬಡಾವಣೆ ಬಿಬಿಎಂಪಿಗೆ ಹಸ್ತಾಂತರ ಆಗಿದೆಯೇ ;

(ಆ) ಈ ಬಡಾವಣೆಯು ರಚಿತವಾಗಿರುವ ಸರ್ವೇ ನಂಬರ್‌ಗಳ ವಿವರ ಒದಗಿಸುವುದು ; ಯಾವ ಯಾವ ಸರ್ವೇ ನಂಬರ್‌ಗಳ ಭೂಮಿಯ ಮೇಲೆ ಕಂದಾಯ ಇಲಾಖೆ ಭೂಸ್ವಾಧೀನ

ಅಧಿಕಾರಿಗಳಿಂದ ನ್ಯಾಯಾಲಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳು (ದಾವೆ) ದಾಖಲಾಗಿದೆ ; ಈ ಪ್ರಕರಣಗಳು ಯಾವ ಹಂತದಲ್ಲಿವೆ (ವಿವರ ಒದಗಿಸುವುದು) ;

(ಇ) ಸರ್ವೇ ನಂಬರ್ ೭ ಮತ್ತು ೭(ಪಿ)ಯಲ್ಲಿ ರಚಿತವಾಗಿರುವ (ಮಂಜೂರಾದ ನಕ್ಷೆ ಪ್ರಕಾರ) ನಿವೇಶನಗಳ ಸಂಖ್ಯೆ ಎಷ್ಟು ; ಸಮ ಮತ್ತು ವಿಷಮ ಅಳತೆಯ ನಿವೇಶನಗಳ ಸಂಖ್ಯೆ ; ನಿವೇಶನ ಸಂಖ್ಯೆ, ಅಳತೆ (ಅಡಿಗಳಲ್ಲಿ) ಮಂಜೂರಾತಿಯಾದ ಸದಸ್ಯರ ಹೆಸರು, ನೋಂದಣಿಯಾದ ದಿನಾಂಕ, ಚಕ್ಕುಬಂದಿ ಈ ವಿವರಗಳನ್ನು ಒದಗಿಸುವುದು ; ಈ ಸರ್ವೇ ನಂಬರ್ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳುವುದಕ್ಕೆ ಯಾವುದೇ ಅಡ್ಡಿ ಆತಂಕಗಳು ಇಲ್ಲವೇ ?

## ವಿದ್ಯುತ್ ಉತ್ಪಾದನೆಯ ಪರಿಮಾಣ ಮತ್ತು ಅಗತ್ಯತೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೫೩ (೯೫೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ರಾಜ್ಯದಲ್ಲಿರುವ ವಿದ್ಯುಚ್ಛಕ್ತಿ ಉತ್ಪಾದನೆ ಸಾಮರ್ಥ್ಯ ಹಾಗೂ ಬೇಡಿಕೆ ಎಷ್ಟು ;

(ಆ) ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳಿಂದ ಹೆಚ್ಚುತ್ತಿರುವ ಬೇಡಿಕೆ ಪೂರೈಸುವ ನಿಟ್ಟಿನಲ್ಲಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

ಬೇಡಿಕೆಗೆ ಸಮನಾಗಿ ಉತ್ಪಾದನೆ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದ ಕ್ರಮಗಳೇನು ;

(ಇ) ಪ್ರಸ್ತುತ ಈ ಸಾಲಿನಲ್ಲಿ ಹೊರ ರಾಜ್ಯಗಳಿಂದ ಪಡೆದುಕೊಂಡ ವಿದ್ಯುತ್ ಪ್ರಮಾಣವೆಷ್ಟು ; ಹಾಗೂ ನಮ್ಮ ರಾಜ್ಯದಲ್ಲಿ ಉತ್ಪಾದನೆಗೊಂಡ ವಿದ್ಯುತ್ ಪ್ರಮಾಣವೆಷ್ಟು ?

## ಸಹಕಾರಿ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳ ನೌಕರರ ನೇಮಕ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೫೪ (೯೫೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಸ್ಥೆಗಳ ಸಂಖ್ಯೆ ಎಷ್ಟು ;

(ಆ) ಕಳೆದ ೦೩ ವರ್ಷಗಳಿಂದ ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಎಷ್ಟು ನೌಕರರುಗಳನ್ನು ನೇಮಕಾತಿ ಮಾಡಲಾಗಿದೆ ; ನೇಮಕಾತಿ ಮಾಡುವಾಗ ರಾಜ್ಯ ಸರ್ಕಾರ ನೌಕರರ ನೇಮಕಾತಿ ನಿಯಮಾವಳಿಗಳನ್ನು ಅನುಸರಿಸುತ್ತಿದೆಯೇ ;

(ಇ) ಪ್ರಸ್ತುತ ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲರ ನೌಕರರ ಸಂಖ್ಯೆ ಎಷ್ಟು ?

## ಕೃಷಿ ಯೋಜನೆಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೫೫ (೯೫೫) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಕಳೆದ ೦೫ ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವತಿಯಿಂದ ಅನುಷ್ಠಾನಗೊಂಡ ಯೋಜನೆಗಳಾವುವು ;

(ಆ) ಈ ಯೋಜನೆಗಳಿಗೆ ಸರ್ಕಾರವು ನಿಗದಿಪಡಿಸಿದ ವೆಚ್ಚ ಹಾಗೂ ವ್ಯಯ ಮಾಡಿದ ವೆಚ್ಚವೆಷ್ಟು ;

(ಇ) ಕಳೆದ ೦೫ ವರ್ಷಗಳಿಂದ ಮೈಸೂರು ಜಿಲ್ಲೆಗೆ ಕೃಷಿ ಇಲಾಖೆಯ ವತಿಯಿಂದ ನೀಡಿರುವ ಸಾಲ ಹಾಗೂ ಈ ಸಾಲದಲ್ಲಿ ಮರುಪಾವತಿಯಾದ ಹಣವೆಷ್ಟು ; ಮನ್ನಾ ಮಾಡಿದ ಹಣವೆಷ್ಟು ?

## ರೈತರಿಗೆ ಕೃಷಿ ಮಾರುಕಟ್ಟೆಯ ಸೌಲಭ್ಯಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೭೫೬ (೯೬೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೃಷಿ ಮಾರುಕಟ್ಟೆಗಳೆಷ್ಟು ; ಎಲ್ಲೆಲ್ಲಿ ಮತ್ತು ಯಾವುವು;

(ಆ) ಅತೀ ಹೆಚ್ಚು ಆದಾಯ ತರುತ್ತಿರುವ ಮಾರುಕಟ್ಟೆಗಳಾವುವು ; ಯಾವುದೇ ವಹಿವಾಟು ನಡೆಯದಿರುವ ಮಾರುಕಟ್ಟೆಗಳು ಇವೆಯೇ ; ಯಾವುವು ;

(ಇ) ಅತೀ ಹೆಚ್ಚು ವಹಿವಾಟು ಮಾಡುತ್ತಿರುವ ಕೃಷಿ ಮಾರುಕಟ್ಟೆಗಳಲ್ಲಿ ರೈತರಿಗೆ ತುಂಬಾ ಅನಾನುಕೂಲ ಹಾಗೂ ಕಿರಿಕಿರಿಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ರೈತರಿಗೆ ಆಗಿರುವ ತೊಂದರೆಗಳನ್ನು ನಿವಾರಣೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಉ) ಪ್ರತಿಯೊಂದು ಮಾರುಕಟ್ಟೆ ಆವರಣದಲ್ಲಿ ರೈತರಿಗೆ ಸಿಗುವ ಮೂಲ ಸೌಲಭ್ಯಗಳೇನು (ವಿವರ ನೀಡುವುದು) ?

## ಯಡಿಯೂರು–ತಿಪಟೂರು ರಸ್ತೆ ಅಭಿವೃದ್ಧಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೭೫೭ (೯೫೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಡಿಯೂರು–ತಿಪಟೂರು ರಸ್ತೆಯನ್ನು ಅಭಿವೃದ್ಧಿಪಡಿಸಲು ಯಾವ ಯೋಜನೆಯಡಿ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ;

(ಆ) ಯಾವಾಗ ಈ ಯೋಜನೆಗೆ ಅನುಮತಿ ಸಿಕ್ಕಿದೆ ; ಕೆಲಸ ಪ್ರಾರಂಭವಾಗಲು ವಿಳಂಬವೇಕೆ ; ಕೆಲವು ಸೇತುವೆ ಕಾಮಗಾರಿಗಳು ಸ್ಥಗಿತಗೊಂಡಿರಲು ಕಾರಣವೇನು ;

(ಇ) ಯಾವ–ಯಾವ ಕಾಮಗಾರಿಗಳನ್ನು ಈ ಯೋಜನೆಯಡಿ ಸೇರಿಸಲಾಗಿದೆ ;

(ಈ) ಎಷ್ಟು ದಿನಗಳಲ್ಲಿ ಈ ಕಾಮಗಾರಿ ಮುಗಿಯಲಿದೆ (ವಿವರ ಕೊಡುವುದು) ?

## ಸರ್ಕಾರದ ಷೇರುಗಳನ್ನು ಹೊಂದಿರುವ ಸಹಕಾರಿ ಬ್ಯಾಂಕ್

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೭೫೮ (೯೫೭) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸರ್ಕಾರದ ಷೇರುಗಳನ್ನು ಪಡೆದಿರುವ ಸಹಕಾರಿ ಸಂಘಗಳೆಷ್ಟು ; ಅವು ಯಾವುವು (ಜಿಲ್ಲಾ, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಈ ಯೋಜನೆ ಜಾರಿಗೆ ಬಂದದ್ದು ಯಾವಾಗ ;

(ಇ) ನೇಕಾರರ ಪತ್ತಿನ ಸಹಕಾರ ಸಂಘಗಳಿಗೆ ಈ ಯೋಜನೆ ನೀಡಲಾಗಿದೆಯೇ ;

(ಈ) ಹಾಗಿದ್ದಲ್ಲಿ, ಯಾವ-ಯಾವ ನೇಕಾರರ ಸಂಘಗಳಿಗೆ ನೀಡಲಾಗಿದೆ (ವಿವರ ನೀಡುವುದು) ?

## ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಖಾಲಿ ನಿವೇಶನ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೭೫೯ (೯೬೧) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಹಾಲಿ ಖಾಲಿ ಇರುವ ನಿವೇಶನಗಳೆಷ್ಟು; ಯಾವುವು; (ವಿವರ ಕೊಡುವುದು)

(ಆ) ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಿಗೆ ರಸ್ತೆ ಮಾಡಲು ಯಾವುದಾದರೂ ನಿವೇಶನವನ್ನು ಪಟ್ಟಣ ಪಂಚಾಯಿ ವಶಪಡಿಸಿಕೊಂಡಿದೆಯೆ ;

(ಇ) ಹಾಗಿದ್ದಲ್ಲಿ ಅವರಿಗೆ ಬದಲಿ ನಿವೇಶನ ನೀಡಲು ಪಟ್ಟಣ ಪಂಚಾಯ್ತಿ ಯಿಂದ ನಿರ್ಧಾರ ಮಾಡಲಾಗಿದೆಯೆ ; ಯಾವಾಗ ; (ವಿವರ ಕೊಡುವುದು)

(ಈ) ಎಷ್ಟು ದಿನಗಳಲ್ಲಿ ಅವರಿಗೆ ನಿವೇಶನ ಮಂಜೂರು ಮಾಡಲಾಗುವುದು ?

## ಸಂಘ ಸಂಸ್ಥೆಗಳ ಹೊಸ ನೋಂದಣಿ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು)** :-

೭೬೦ (೯೫೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವುದೇ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಹೊಸದಾಗಿ ನೋಂದಣಿ ಮಾಡಲು (ಸಂಘ, ಸಂಸ್ಥೆಗಳು ಇತ್ಯಾದಿ) ಇರುವ ಮಾನದಂಡವೇನು ;

(ಆ) ರಾಜ್ಯ ಮಟ್ಟದ ಸಂಘಗಳು ನೋಂದಣಿ ಆದ ನಂತರ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ನೋಂದಣಿ ಮಾಡಲು ಇರುವ ತೊಂದರೆಗಳೇನು ;

(ಇ) ಹಾಗಿದ್ದಲ್ಲಿ, ಜಿಲ್ಲಾ, ತಾಲ್ಲೂಕು ಮಟ್ಟದ ನೋಂದಾವಣಿಗೆ ಪ್ರತ್ಯೇಕ ನಿಯಮಗಳುಳ್ಳ ಆದೇಶ ಮಾಡಲಾಗಿದೆಯೇ ;

(ಈ) ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ನೋಂದಣಿ ಮಾಡಲು ಸಾಧ್ಯವಿದೆ (ವಿವರ ಕೊಡುವುದು) ?

## ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಸಾಲ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೬೧ (೯೬೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ಗಳಲ್ಲಿ ಕಳೆದ ೩ ವರ್ಷಗಳಲ್ಲಿ ವಿತರಣೆ ಮಾಡಿರುವ ವಿವಿಧ ಸಾಲದ ಮೊಬಲಗು ಹಾಗೂ ಸಾಲ ಪಡೆದ ರೈತರ ಸಂಖ್ಯೆ ಎಷ್ಟು (ಪ್ರತಿ ಬ್ಯಾಂಕ್‌ನ ವಿವರ ನೀಡುವುದು) ;

(ಆ) ಮೇಲ್ಕಂಡ ಬ್ಯಾಂಕ್‌ಗಳಲ್ಲಿ ಇರುವ ರೈತರ ಠೇವಣಿ ಹಣವೆಷ್ಟು ;

(ಇ) ಪ್ರತಿ ಬ್ಯಾಂಕ್ ತನ್ನದೇ ಸಂಗ್ರಹಿತ ಠೇವಣಿ ಹಣದ ಮೂಲಕ ತನ್ನ ಸಹಕಾರಿಗಳಿಗೆ ಸಾಲ ನೀಡುವಂತೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

(ಈ) ಸಹಕಾರ ಕ್ಷೇತ್ರದಲ್ಲಿ ಸ್ವಾವಲಂಬಿ ಬ್ಯಾಂಕ್‌ಗಳಿಗೆ ಉತ್ತೇಜನ ನೀಡುವ ಯೋಜನೆ ಸರ್ಕಾರಕ್ಕೆ ಇದೆಯೇ ?

## ಸಹಕಾರ ಸಂಘಗಳಲ್ಲಿ ಸಹಕರಣ (Co-opt )ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೬೨ (೯೬೫) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಯಾವ ಯಾವ ಸಹಕಾರಿ ಸಂಘಗಳಲ್ಲಿ ಜಿಲ್ಲಾ ಬ್ಯಾಂಕಿನ ಪ್ರತಿನಿಧಿಯನ್ನು ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಸಹಕರಣ (Co-opt ) ಮಾಡಿಕೊಳ್ಳಲಾಗಿದೆ ;

(ಆ) ಪ್ರಸ್ತುತ ರಾಜ್ಯದಲ್ಲಿರುವ ಸಹಕಾರಿ ಕಾಯ್ದೆಯಲ್ಲಿ ಈ ರೀತಿಯ ಸಹಕರಣ (Co-opt) ಕ್ಕೆ ಅವಕಾಶವಿದೆಯೇ ;

(ಇ) ಸಹಕಾರಿ ಕಾಯ್ದೆಗೆ ವಿರುದ್ಧವಾಗಿ ವರ್ತಿಸುವ ಸಹಕಾರ ಸಂಘಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳವುದೇ ?

## ಬಿ. ಹೆಚ್. ರಸ್ತೆಯ ರೈಲ್ವೆ ಮೇಲು ಸೇತುವೆ

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೬೩ (೯೬೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾವತಿ ಬಳಿ ಬಿ. ಎಚ್. ರಸ್ತೆಯಲ್ಲಿ ನಿರ್ಮಿಸಲಾಗುತ್ತಿರುವ ರೈಲ್ವೆ ಲೇನ್ ಮೇಲು ಸೇತುವೆ ಕಾಮಗಾರಿ ಪ್ರಾರಂಭ ಆಗಿರುವುದು ಯಾವಾಗ ;

(ಆ) ಕಾಮಗಾರಿ ಪೂರೈಸದೇ ಇರುವುದರಿಂದ ಜನ ಸಾಮಾನ್ಯರಿಗೆ ಬಹಳಷ್ಟು ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಾಮಗಾರಿಯನ್ನು ಪೂರ್ತಿ ಮಾಡದೇ ಇರಲು ಸರ್ಕಾರಕ್ಕೆ ಇರುವ ಅಡಚಣೆಗಳೇನು ;

(ಇ) ಸಾರ್ವಜನಿಕ ಸಂಚಾರಕ್ಕೆ ಯಾವಾಗ ಸೇತುವೆಯನ್ನು ಮುಕ್ತ ಮಾಡಲಾಗುತ್ತದೆ ?

## ತೋಟಗಾರಿಕೆ ಪರಿಕರಗಳು

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೬೪ (೯೬೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರಿಗೆ ತೋಟಗಾರಿಕೆಗೆ ಉಪಯೋಗವಾಗುವಂತಹ ಯಾವ ಯಾವ ಪರಿಕರಗಳನ್ನು ವಿತರಿಸಲಾಗುತ್ತಿದೆ (ವಿವರ ನೀಡುವುದು) ;

(ಆ) ಇವುಗಳನ್ನು ಯಾವ ದರದಲ್ಲಿ ಖರೀದಿಸಲಾಗುತ್ತಿದೆ (ವಿವರ ನೀಡುವುದು) ;

(ಇ) ಇವುಗಳಿಗೆ ಸರ್ಕಾರದಿಂದ ನೀಡುತ್ತಿರುವ ಸಬ್ಸಿಡಿ/ಸಹಾಯ ಧನವೆಷ್ಟು (ವಿವರ ನೀಡುವುದು) ?

## ಕೃಷಿ ಪರಿಕರಗಳು

**ಶ್ರೀ ಭಾನುಪ್ರಕಾಶ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೬೫ (೯೬೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರೈತರಿಗೆ ಕೃಷಿಗೆ ಉಪಯೋಗವಾಗುವಂತಹ ಯಾವ ಯಾವ ಪರಿಕರಗಳನ್ನು ವಿತರಿಸಲಾಗುತ್ತಿದೆ (ವಿವರದೊಂದಿಗೆ) ;

(ಆ) ಇವುಗಳನ್ನು ಯಾವ ದರದಲ್ಲಿ ಖರೀದಿಸಲಾಗುತ್ತಿದೆ (ವಿವರದೊಂದಿಗೆ) ;

(ಇ) ಇವುಗಳಿಗೆ ಸರ್ಕಾರದಿಂದ ನೀಡುತ್ತಿರುವ ಸಬ್ಸಿಡಿ/ಸಹಾಯ ಧನವೆಷ್ಟು (ವಿವರ ನೀಡುವುದು) ?

## ವಿದ್ಯುತ್ ಸಮಸ್ಯೆ: ಪರಿಹಾರ ಕ್ರಮಗಳು

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೬೬ (೯೭೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ವಿದ್ಯುತ್ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರ ಯಾವ-ಯಾವ ರೀತಿಯ ಮಾರ್ಗೋಪಾಯಗಳನ್ನು ಅನುಸರಿಸುತ್ತಿದೆ ; ಬೇರೆ-ಬೇರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಲಾಗುತ್ತಿದೆಯೇ ; ಖರೀದಿಸುತ್ತಿದ್ದರೆ, ಯಾವ ರಾಜ್ಯದಿಂದ ಮತ್ತು ಖರೀದಿಯ ಪ್ರಮಾಣ ಮತ್ತು ಅದಕ್ಕೆ ತಗಲುವ ವೆಚ್ಚದ ವಿವರ ತಿಳಿಸುವುದು ;

(ಆ) ಹಲವಾರು ಜಿಲ್ಲೆಗಳಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ವಿದ್ಯುತ್‌ನ್ನು ಅವಲಂಬಿಸಿದ್ದು, ಸಾಕಷ್ಟು ವಿದ್ಯುತ್ ಪೂರೈಸಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ ಕಾರಣವೇನು ; ರಾಜ್ಯದಲ್ಲಿ ಕೃಷಿ ಚಟುವಟಿಕೆಗೆ ಬಳಕೆಯಾಗುವ ವಿದ್ಯುತ್ ಪ್ರಮಾಣವೆಷ್ಟು ; ಗೃಹಬಳಕೆಗೆ, ಔದ್ಯೋಗಿಕರಣ ಹಾಗೂ ಇತರೆ ಚಟುವಟಿಕೆಗಳಿಗೆ ಬಳಕೆಯಾಗುತ್ತಿರುವ ಪ್ರಮಾಣವೆಷ್ಟು ;

(ಇ) ಗ್ರಾಮೀಣ ಪ್ರದೇಶಗಳಲ್ಲಿ ಒಂದು ದಿನಕ್ಕೆ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾಗುತ್ತಿದೆ ಮತ್ತು ಎಷ್ಟು ಪ್ರಮಾಣದಲ್ಲಿ

ಪೂರೈಸಲಾಗುತ್ತಿದೆ ಹಾಗೂ ಕಳೆದ ೨ ವರ್ಷದಿಂದೀಚೆಗೆ ಎಷ್ಟು ಸಬ್–ಸ್ಟೇಷನ್‌ಗಳನ್ನು ನಿರ್ಮಿಸಲಾಗಿದೆ ; ಎಷ್ಟು ಟ್ರಾನ್ಸ್ ಫಾರ್ಮರ್ (ವಿದ್ಯುತ್ ಪರಿವರ್ತಕ) ಗಳನ್ನು ಖರೀದಿಸಲಾಗಿದೆ; ರಾಜ್ಯದಲ್ಲಿರುವ ಒಟ್ಟು ವಿದ್ಯುತ್ ಪರಿವರ್ತಕಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

## ಸೌರಶಕ್ತಿ ಸ್ಥಾವರಗಳು

**ಶ್ರೀ ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) :–**

೭೬೭ (೯೭೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಸೌರಶಕ್ತಿ ಸ್ಥಾವರಗಳು ಎಲ್ಲೆಲ್ಲಿವೆ ;

(ಆ) ಸೌರಶಕ್ತಿ ಉತ್ಪಾದನೆ ಬೇರೆ ವಿದ್ಯುತ್ ಉತ್ಪಾದನೆಗಳಿಂದ ಶೇಕಡಾವಾರು ಎಷ್ಟು ;

(ಇ) ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಸರ್ಕಾರ ನೀಡುವ ಉತ್ತೇಜನಕಾರಿ ಕಾರ್ಯಕ್ರಮಗಳೇನು ?

## ತೆರೆದ ಬಾವಿಗಳ ಸಾಲ ಮನ್ನಾ

**ಶ್ರೀ ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) :–**

೭೬೮ (೯೭೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ವಿವಿಧ ಸಹಕಾರಿ ಬ್ಯಾಂಕ್ ಗಳಿಂದ ತೆರೆದ ಬಾವಿಗಳಿಗೆ ನೀಡಿರುವ ಸಾಲವೆಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು) ;

(ಆ) ನೀರಿನ ಮೂಲ ಇಲ್ಲದೇ ಇರುವ ತೆರೆದ ಬಾವಿಗಳು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಸಾಲವನ್ನು ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

## ಶ್ರೀರಂಗಪಟ್ಟಣ ಬೀದರ್ ರಸ್ತೆ.

**ಶ್ರೀ ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ ) :–**

೭೬೯ (೯೮೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶ್ರೀರಂಗಪಟ್ಟಣ–ಬೀದರ್ ರಸ್ತೆಯ ರಾಜ್ಯ ಹೆದ್ದಾರಿ ರಸ್ತೆಯಲ್ಲಿನ ಹಿರಿಯೂರಿನಿಂದ ಚಳ್ಳಕೆರೆ ಹೋಗುವ ಮಾರ್ಗದ ಮಧ್ಯೆ ಸಾಣಿಕೆರೆ ಎಂಬ ಹಳ್ಳಿಯ ರಸ್ತೆ ಅಪಘಾತವಲಯ ಎಂದು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರಸ್ತೆಯನ್ನು ಅಪಘಾತ ರಹಿತ ರಸ್ತೆಯನ್ನಾಗಿ ಮಾಡಲು ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ಕ್ರಮಗಳೇನು ?

## ರಸ್ತೆಗಳಲ್ಲಿ ಟೋಲ್ ಸಂಗ್ರಹಣೆ

**ಶ್ರೀ ಎಂ. ಶ್ರೀನಿವಾಸ್ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೭೭೦ (೮೯೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯದ ಯಾವ ಯಾವ ಭಾಗಗಳಲ್ಲಿ, ರಸ್ತೆಗಳಲ್ಲಿ ಟೋಲ್ ಸಂಗ್ರಹಣೆ ಮಾಡಲಾಗುತ್ತಿದೆ (ರಸ್ತೆವಾರು ವಿವರಗಳನ್ನು ಒದಗಿಸುವುದು) ;

(ಆ) ಟೋಲ್ ಸಂಗ್ರಹಿಸುತ್ತಿರುವ ಕಂಪನಿಗಳು, ಈ ರಸ್ತೆಗಳ ನಿರ್ಮಾಣಕ್ಕಾಗಿ ಆಯಾಯ ಕಂಪನಿಗಳು ವ್ಯಯಿಸಿದ ಹಣವೆಷ್ಟು ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಇ) ಇಂತಹ ಎಲ್ಲಾ ರಸ್ತೆಗಳಲ್ಲಿ ಸಂಗ್ರಹಿಸಲಾಗುತ್ತಿರುವ ಟೋಲ್ ಶುಲ್ಕ ಎಷ್ಟು ; ಯಾವ ನಿಗದಿತ ಅವಧಿಯವರೆಗೆ ಇಂತಹ ಶುಲ್ಕ ಸಂಗ್ರಹಕ್ಕೆ ಅನುಮತಿಸಲಾಗಿದೆ ; ಟೋಲ್ ಶುಲ್ಕ ಸಂಗ್ರಹ ನಿಟ್ಟಿನಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡವೇನು ;

(ಈ) ಹಲವಾರು ಪ್ರಕರಣಗಳಲ್ಲಿ ರಸ್ತೆಗಳು ಸಂಪೂರ್ಣ ಪೂರ್ಣಗೊಳ್ಳದಿದ್ದರೂ ಸಹ ಟೋಲ್ ಶುಲ್ಕ ಸಂಗ್ರಹಿಸುತ್ತಿರುವಂತಹ ಮತ್ತು ಶುಲ್ಕ ವಸೂಲು ಅವಧಿ ಮುಗಿದಿದ್ದರೂ ಸಹ ವಸೂಲು ಮಾಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅಂತಹ ಪ್ರಕರಣಗಳ ಮಾಹಿತಿ ಮತ್ತು ಇವುಗಳ ವಿರುದ್ಧ ಕೈಗೊಂಡ ಕ್ರಮಗಳೇನು (ಮಾಹಿತಿ ಒದಗಿಸುವುದು) ?

## ಬೆಂಗಳೂರು ಪ್ರಾಂತೀಯ ಸಹಕಾರ ಸಂಘಗಳ ಕಛೇರಿ ಕಾರ್ಯನಿರ್ವಹಣೆ

**ಶ್ರೀ ಡಿ. ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೭೧ (೮೯೬) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಧಿಸೂಚನೆ ಕ್ರಮಾಂಕ: ಸಿಓ/೧೩೯/ಸಿಎಲ್‌ಎಂ/೨೦೧೦, ದಿ: ೧೭.೦೨.೨೦೧೧ ಮತ್ತು ಕ್ರಮಾಂಕ: ಸಿಓ/೧೩೯/ಸಿಎಲ್‌ಎಂ/

೨೦೧೦ ದಿ: ೦೪.೦೭.೨೦೧೦ರ ಮೇರೆಗೆ, ಯಾವ ಸಹಕಾರ ಸಂಘಗಳ ಬಗ್ಗೆ ಯಾವ ಯಾವ ನಿಯಮಗಳಡಿ, ಬೆಂಗಳೂರು ಪ್ರಾಂತೀಯ ಸಹಕಾರ ಸಂಘಗಳ ಕಛೇರಿಯ ಅಧಿಕಾರಿಗಳು ಆದೇಶ ಹೊರಡಿಸಿರುತ್ತಾರೆ ಹಾಗೂ ಇದನ್ನು ಹೊರಡಿಸಲು ಕಾರಣವಾದ ಹಿನ್ನೆಲೆಗಳ ಪೂರ್ಣ ಮಾಹಿತಿ ಒದಗಿಸುವುದು ;

(ಆ) ಮೇಲ್ಕಂಡ ಆದೇಶ ಹಾಗೂ ನಂತರದ ಆದೇಶಗಳಲ್ಲಿ ದೃಢೀಕೃತವಾಗಿರುವ ಆರೋಪಗಳಾವುವು ; ಪ್ರತಿ ಆರೋಪವಾರು ಪೂರ್ಣ ಮಾಹಿತಿ ಒದಗಿಸುವುದು ;

(ಇ) ಈ ವಿಷಯದಲ್ಲಿ ಸೂಕ್ತ ನಿಯಮಗಳಡಿ ಅಧಿಕಾರಿಗಳು ಕ್ರಮ ಕೈಗೊಳ್ಳದೆ ವಿಳಂಬ ನೀತಿ ಅನುಸರಿಸಲು ಕಾರಣಗಳೇನು ; ಎಷ್ಟು ಕಾಲಮಿತಿಯಲ್ಲಿ ಯಾವ ಯಾವ ಕ್ರಮ ಕೈಗೊಳ್ಳಲಾಗುವುದು ;

(ಈ) ಸದರಿ ಸಂಸ್ಥೆಯ ಮೇಲೆ ಎಷ್ಟು ಸದಸ್ಯರು ಅರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ ; ಹಾಗೂ ಇವರುಗಳು ಈವರೆವಿಗೂ ನಿವೇಶನ ಬಾಬ್ತು ಪಾವತಿಸಿರುವ ಹಣದ ಪೂರ್ಣ ವಿವರ ಒದಗಿಸುವುದು ?

## ಎ.ಪಿ.ಎಂ.ಸಿ. ಮಾರುಕಟ್ಟೆ ಪದಾರ್ಥಗಳು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೭೨ (೯೦೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಾರುಕಟ್ಟೆ ಶುಲ್ಕದಿಂದ ವಿನಾಯಿತಿ ಪಡೆದ ಪದಾರ್ಥಗಳ ವಿವರ ನೀಡುವುದು ;

(ಆ) ಮಾರುಕಟ್ಟೆ ಶುಲ್ಕ ಪಾವತಿಯ ವಿಳಂಬವಾದಲ್ಲಿ ಯಾವ ಕ್ರಮ ಅಥವಾ ಆಧಾರದಲ್ಲಿ ದಂಡ ವಿಧಿಸಲಾಗುವುದು ; ಪ್ರಸ್ತುತ ಯಾವ ಶೇಕಡಾವಾರಿನಲ್ಲಿ ದಂಡ ವಿಧಿಸಲಾಗುವುದು ; ಈಗ ವಿಧಿಸುತ್ತಿರುವ ದಂಡದ ಕ್ರಮ ಸರಿಯಾಗಿದೆಯೇ ;

(ಇ) ಮಾರುಕಟ್ಟೆ ಶುಲ್ಕವನ್ನು ವಾರಕ್ಕೆ ಒಮ್ಮೆ ಸಮಿತಿಗೆ ಸಲ್ಲಿಸುವ ಪದ್ಧತಿ ಜಾರಿಯಲ್ಲಿದೆಯೇ ; ಇದ್ದಲ್ಲಿ ಇದನ್ನು ಮಾರ್ಪಡಿಸಿ ತಿಂಗಳಿಗೊಮ್ಮೆ ವ್ಯಾಪಾರ--ವಹಿವಾಟಿನ ವಿವರಗಳೊಂದಿಗೆ ಸಲ್ಲಿಸಲು ಅನುಕೂಲ ಮಾಡಿಕೊಡಬಹುದೇ ; ಇದನ್ನು ಯಾವಾಗ ಮಾಡಲಾಗುವುದು ;

(ಈ) ಪರವಾನಗಿ ಪಡೆದ ವರ್ತಕರಿಗೆ ರಾಜ್ಯದ ಎಲ್ಲಿಯಾದರೂ ಖರೀದಿ ಮಾಡಲು ಅವಕಾಶ ಇದೆಯೇ ; ಇದ್ದಲ್ಲಿ, ಇದೇ ರೀತಿ ಮಾರುಕಟ್ಟೆ ಹೊರಗೆ ಮಾರಾಟ ಮಾಡಲು ಏಕೆ ಅವಕಾಶ ಕಲ್ಪಿಸಿಲ್ಲ ; ಈ

ಬಗ್ಗೆ ಕ್ರಮ ತೆಗೆದುಕೊಂಡು ಅವಕಾಶ ಕಲ್ಪಿಸಲಾಗುವುದೇ ; ಇಲ್ಲದಿದ್ದಲ್ಲಿ, ಏಕೆ ಕಲ್ಪಿಸಲಾಗುವುದಿಲ್ಲ ಎಂಬ ಸವಿವರ ಕಾರಣ ನೀಡುವುದು ;

(ಉ) ಮಾರುಕಟ್ಟೆ ವ್ಯಾಪಾರ ವಹಿವಾಟಿನ ವಿವರ ಸಲ್ಲಿಸುವುದು ಮತ್ತು ಶುಲ್ಕ ಪಾವತಿಸುವ ವಿಧಾನಗಳಲ್ಲಿ ಯಾವುದೇ ಸುಧಾರಣೆ ಅಥವಾ ಸರಳೀಕರಣ ಮಾಡಲು ಕೈಗೊಂಡಿರುವ ಕ್ರಮಗಳೇನು (ವಿವರವಾಗಿ ತಿಳಿಸುವುದು) ;

(ಊ) ಮಾರುಕಟ್ಟೆ ಪ್ರಾಂಗಣದಲ್ಲಿ "ಲೀಸ್ ಕಮ್ ಸೇಲ್" ಹಂಚಿಕೆಯಲ್ಲಿ ಅಂಗಡಿ ಮಳಿಗೆ/ಗೋದಾಮು ಪಡೆದ ವರ್ತಕರಿಗೆ ಅಂಗಡಿಯ ಸಂಪೂರ್ಣ ಮಾಲೀಕತ್ವದ ಹಕ್ಕು ನೀಡಲಾಗಿದೆಯೇ ; ಗುತ್ತಿಗೆ ಅವಧಿ ಮುಗಿದ ನಂತರ ಅಂಗಡಿ/ಗೋದಾಮಿನ ಸಂಪೂರ್ಣ ಮಾಲೀಕತ್ವ ವರ್ತಕರಿಗೆ ಬರುತ್ತದೆಯೇ (ವಿವರಗಳನ್ನು ತಿಳಿಸುವುದು) ;

(ಋ) ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ಮಾಡಿ ಸುಧಾರಣೆಗಳನ್ನು ತರುವ ಉದ್ದೇಶ ಸರ್ಕಾರಕ್ಕಿದೆಯೇ ಇದ್ದಲ್ಲಿ, ಯಾವ ಯಾವ ಸುಧಾರಣೆಗಳನ್ನು ತರಲು ತಿದ್ದುಪಡಿ ಮಾಡಲಾಗುವುದು ?

## ಹನಿ ನೀರಾವರಿ ವ್ಯವಸಾಯ

**ಡಾ॥ ಎಂ. ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೭೩ (೯೦೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಿಂದ ಹನಿ ನೀರಾವರಿ ವ್ಯವಸಾಯಕ್ಕೆ ನೀಡುತ್ತಿದ್ದ ಸಬ್ಸಿಡಿಯನ್ನು ಏಕಾಏಕಿ ನಿಲ್ಲಿಸಿದ್ದು, ಹಾಗೆ ನಿಲ್ಲಿಸಲು ಕಾರಣಗಳೇನು ;

(ಆ) ಇಲಾಖೆಯಿಂದ ಯಾವ ಯಾವ ಬೆಳೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ ; (ವಿವರ ನೀಡುವುದು) ಇಲಾಖೆಯಿಂದ ರೈತರಿಗೋಸ್ಕರ ಹೊಸದಾಗಿ ರೂಪಿಸಿರುವ ಯೋಜನೆಗಳೇನು (ವಿವರ ನೀಡುವುದು) ?

## ಸೌರಶಕ್ತಿ ಯೋಜನೆ

**ಶ್ರೀ ಆಚಾರ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೭೭೪ (೯೪೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸೌರಶಕ್ತಿ ಯೋಜನೆಗೆ ಒಳಪಟ್ಟ ಎರಡು ಜಿಲ್ಲೆಗಳಾವುವು ;

(ಆ) ೨೦೧೨-೧೩ನೇ ಸಾಲಿನಿಂದ ಇಲ್ಲಿಯವರೆಗೆ ಪರಿಶಿಷ್ಟ ಜಾತಿ/ಪಂಗಡಗಳ ರೈತರಿಗೆ ಶೇ.೯೦ ರಿಯಾಯಿತಿಯಲ್ಲಿ ಮತ್ತು ಇತರ ರೈತರಿಗೆ ಶೇ.೫೦ ರಿಯಾಯಿತಿಯಲ್ಲಿ ಕೊಪ್ಪಳ ಜಿಲ್ಲೆಯ ಎಷ್ಟು ರೈತರಿಗೆ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಒದಗಿಸಲಾಗಿದೆ ಎಂಬುದನ್ನು ತಿಳಿಸುವುದು ;

(ಇ) ಈ ಯೋಜನೆಯ ಸದುಪಯೋಗವನ್ನು ಪಡೆದುಕೊಂಡ ರೈತರ ವಿವರಗಳನ್ನು ತಾಲ್ಲೂಕುವಾರು ಮಾಹಿತಿ ನೀಡುವುದು ;

(ಈ) ಈ ಯೋಜನೆಗೆ ಒಳಪಡಬೇಕಾದರೆ ಸರ್ಕಾರ ವಿಧಿಸಿದ ಮಾನದಂಡಗಳೇನು (ವಿವರಣೆ ನೀಡುವುದು) ;

(ಉ) ರೈತರು ಈ ಯೋಜನೆಗೆ ಒಳಪಡಬೇಕಾದರೆ ಎಷ್ಟು ಹಣವನ್ನು ಸಂದಾಯ ಮಾಡಬೇಕು ; ಎಲ್ಲಿ ಸಂದಾಯ ಮಾಡಬೇಕು (ಪೂರ್ಣ ವಿವರಣೆ ನೀಡುವುದು) ?

## ರೈಸ್ ಟೆಕ್ನಾಲಜಿ ಪಾರ್ಕ್

**ಶ್ರೀ ಆಚಾರ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೭೫ (೯೫೦) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಯಾವಾಗ ಮಾಡಲಾಗುವುದು ;

(ಆ) ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನಗೆ ಸರ್ಕಾರ ಭೂಮಿಯನ್ನು ವಶಪಡಿಸಿಕೊಂಡಿದೆಯೇ ; ವಶಪಡಿಸಿಕೊಂಡಿದ್ದಲ್ಲಿ ವಿವರಗಳನ್ನು ನೀಡುವುದು ;

(ಇ) ಈ ಪಾರ್ಕ್‌ಗೆ ಭೂಮಿಯನ್ನು ನೀಡಿದ ರೈತರಿಗೆ ಎಷ್ಟು ಪರಿಹಾರ ಮೊತ್ತವನ್ನು ನೀಡಲಾಗಿದೆ (ಮಾಹಿತಿ ನೀಡುವುದು) ;

(ಈ) ಈ ಯೋಜನೆಯಿಂದ ಅಲ್ಲಿ ರೈತರಿಗೆ ಉದ್ಯೋಗ ಒದಗಿಸಬಹುದಾಗಿದೆಯೇ ;

(ಉ) ಈ ಯೋಜನೆಗೆ ಸರ್ಕಾರ ನಿಗದಿಪಡಿಸಿದ ಮೊತ್ತ ಎಷ್ಟು ; ಈ ಯೋಜನೆಯನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು ; ಇಲ್ಲಿಯವರೆಗೆ ಪ್ರಾರಂಭ ಮಾಡದಿರುವುದಕ್ಕೆ ಕಾರಣಗಳೇನು (ತಿಳಿಸುವುದು) ?

## ೧೧೦ ಕೆ.ವಿ.ಎ. ಸ್ಟೇಷನ್ ನಿರ್ಮಾಣ

**ಶ್ರೀ ಆಚಾರ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೭೭೬ (೯೫೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಮಲ್ಲಾಪೂರ ಗ್ರಾಮದಲ್ಲಿ ೧೧೦ ಕೆ.ವಿ.ಎ ಸ್ಟೇಷನ್ ನಿರ್ಮಾಣ ಕಾಮಗಾರಿ ಸದ್ಯ ಯಾವ ಹಂತದಲ್ಲಿದೆ ;

(ಆ) ಸದರಿ ಕಾಮಗಾರಿಗೆ ಚಾಲನೆ ನೀಡಿದ್ದು ಯಾವಾಗ ;

(ಇ) ಸದರಿ ಯೋಜನೆಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಲಾಗಿದೆಯೇ ; ಪರಿಹಾರಧನ ಪಾವತಿಸಲಾಗಿದೆಯೇ ;

(ಈ) ಈ ಎಲ್ಲಾ ಕಾರ್ಯಗಳು ಮುಕ್ತಾಯಗೊಂಡಿದ್ದರೂ ನೂತನ ಸ್ಟೇಷನ್ ನಿರ್ಮಾಣಕ್ಕೆ ಆಗುತ್ತಿರುವ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆಯೇ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸ.ಕೇ.ಮು ಘಟಕ-2, ಬೆಂಗಳೂರು-59, ಕಾ.ಸೂ. ಸಂ. 03377, 1,000 ಪ್ರತಿಗಳು, 04-07-2014